# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಬೆಂಗಳೂರು: ಶಂಕರಪುರದಲ್ಲಿ ನಡೆದ ವಿಶ್ವ ಹಿಂದೂ ಪರಿಷದ್‌ನ ಪ್ರಾಂತ ಕಾರ್ಯಾಲಯ 'ಧರ್ಮಶ್ರೀ' ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ಗುರೂಜಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ವಿಶ್ವ ಹಿಂದೂ ಪರಿಷದ್‌ನ ಅಂತರಾಷ್ಟ್ರೀಯ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್, ಹಿರಿಯ ಕಾರ್ಯಕರ್ತ ವೈ.ಕೆ.ರಾಘವೇಂದ್ರ ರಾವ್ ಭಾಗವಹಿಸಿದರು.


ಸಂಪುಟ : 46 | ಸಂಚಿಕೆ : 09 | ಶ್ರಾವಣ–ಭಾದ್ರಪದ | ಕಲಿಯುಗಾಬ್ದ 5126 | 01–09–2024 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


## ಬಾಂಗ್ಲಾದೇಶದ ಆಂತರಿಕ ಅರಾಜಕತೆ: ಕಾರಣಗಳು, ಪರಿಣಾಮಗಳು

ಭಾರತ ಅತ್ಯಂತ ಹೆಚ್ಚು ಗಡಿಯನ್ನು ಹಂಚಿಕೊಂಡಿರುವುದು ಬಾಂಗ್ಲಾದೇಶದ ಜೊತೆಗೆ. ಭಾರತ ಮತ್ತು ಬಾಂಗ್ಲಾದೇಶದ ನಡುವೆ 4096ಕಿ.ಮೀ. ಗಡಿಯನ್ನು ಹೊಂದಿದ್ದೇವೆ. ಸಾಂಸ್ಕೃತಿಕವಾಗಿ, ಐತಿಹಾಸಿಕವಾಗಿ, ಭೌಗೋಳಿಕವಾಗಿ, ನೈತಿಕವಾಗಿ ಬಾಂಗ್ಲಾದೇಶದೊಂದಿಗೆ ಸಂಬಂಧವನ್ನು ಹೊಂದಿರುವ ಭಾರತಕ್ಕೆ ಪ್ರಸ್ತುತ ಬಾಂಗ್ಲಾದೇಶದಲ್ಲಿ ನಡೆಯುತ್ತಿರುವ ಆಂತರಿಕ ಕಲಹಗಳು, ಗಲಭೆಗಳು ಮತ್ತು ಅದರಿಂದಾಗುತ್ತಿರುವ ಪ್ರಾಣಹಾನಿ ನಮ್ಮ ರಾಷ್ಟ್ರದ ಮೇಲೂ ಅಗಾಧವಾದ ಪರಿಣಾಮವನ್ನು ಬೀರುತ್ತದೆ.

ಇದು ಅಸ್ಥಿರತೆ, ಅನಿಶ್ಚಿತತೆಗಳ ಕಾಲ. ಜಗತ್ತಿನ ಯಾವುದೋ ಒಂದು ಮೂಲೆಯಲ್ಲಿ ಉಂಟಾದ ಅನಿರೀಕ್ಷಿತ ಬೆಳವಣಿಗೆ ಇನ್ನೊಂದು ಮೂಲೆಯಲ್ಲಿರುವ ದೇಶದ ಆರ್ಥಿಕ, ರಾಜಕೀಯ ಬದಲಾವಣೆಗಳಿಗೆ ಕಾರಣವಾಗಬಹುದು. ಏಕೆಂದರೆ ಇಂದು ನಾವು ಕಾಣುವ ಬಹುಧ್ರುವೀಯ ಜಗತ್ತು ನಡೆಯುವುದು 'ಸಹಕಾರ' ಎಂಬ ಪರಿಕಲ್ಪನೆಯ ಮೇಲೆ. ಹಾಗಾಗಿ ಇಲ್ಲಿ ಒಂದು ದೇಶದ ರಾಜಕೀಯ ಭೌಗೋಳಿಕ ಆಗುಹೋಗುಗಳ ಬಗ್ಗೆ ಇನ್ನೊಂದು ದೇಶ ಗಮನಿಸುತ್ತಿರುತ್ತದೆ. ಒಂದು ದೇಶದ ಉನ್ನತಿ ಅಥವಾ ಪತನ ನೆರೆಹೊರೆಯ ರಾಷ್ಟ್ರದ ಮೇಲೆ ಪರಿಣಾಮ ಬೀರುತ್ತದೆ. ಅದೇ ಕಾರಣಕ್ಕೆ ಬಾಂಗ್ಲಾದಲ್ಲಿ ಹೊತ್ತಿದ ಕಿಡಿಯನ್ನು ಭಾರತ ಎಚ್ಚರಿಕೆಯಿಂದ ಗಮನಿಸಬೇಕಾಗಿದೆ.

**ಬಾಂಗ್ಲಾದಲ್ಲಿನ ಅರಾಜಕತೆಗೆ ಕಾರಣಗಳು:** 1971ರ ಬಾಂಗ್ಲಾ ವಿಮೋಚನಾ ಯುದ್ಧದಲ್ಲಿ ಮೃತರಾದವರ ಕುಟುಂಬದವರಿಗೆ ಶೇಕಡಾ 30ರಷ್ಟು ಮೀಸಲಾತಿ ನೀಡುವ ಬಗ್ಗೆ ಅಲ್ಲಿನ ವಿದ್ಯಾರ್ಥಿಗಳು ಅಸಮಾಧಾನ ಹೊಂದಿದ್ದರು. ಬಾಂಗ್ಲಾದೇಶದಲ್ಲಿ ಈಗಾಗಲೇ 10% ಮಹಿಳೆಯರಿಗೆ, 10% ನಿರ್ದಿಷ್ಟ ಜಿಲ್ಲೆಗಳ ಜನರಿಗೆ, 5% ಅಲ್ಪಸಂಖ್ಯಾತರಿಗೆ, 6% ಅಂಗವೈಕಲ್ಯ ಇರುವವರಿಗೆ ಮೀಸಲಾತಿ ಇರುವ ಕಾರಣ ಈ ಮೀಸಲಾತಿಯ ತೀರ್ಮಾನದಿಂದಾಗಿ ವಿದ್ಯಾರ್ಥಿಗಳು ಬೀದಿಗಿಳಿದರು. ಆದರೆ ವಿದ್ಯಾರ್ಥಿಗಳ ಪ್ರತಿಭಟನೆ ಇದ್ದಕ್ಕಿದ್ದಂತೆ ಹಿಂಸಾತ್ಮಕ ರೂಪ ತಾಳಿತು. ಪ್ರತಿಭಟನೆಯ ಹೆಸರನ್ನು ಬಳಸಿಕೊಂಡು ಮೂಲಭೂತವಾದಿ ಮನಸ್ಥಿತಿ ತನ್ನ ಮುಖವನ್ನು ಪ್ರಕಟೀಕರಣಗೊಳಿಸಲು ಶುರುಮಾಡಿತು. ಅಲ್ಪಸಂಖ್ಯಾತರ ಮನೆ, ಅಂಗಡಿ, ಆರಾಧನಾಲಯಗಳು ಹೊತ್ತಿ ಉರಿದವು. ಮೂಲಗಳ ಪ್ರಕಾರ ಐವತ್ತರಷ್ಟು ದೇಗುಲಗಳನ್ನು ಪ್ರತಿಭಟನಾಕಾರರು ಬೆಂಕಿ ಹಚ್ಚಿ ನಾಶ ಮಾಡಿದರು. ಮೂಲಭೂತವಾದಿಗಳಿಗೆ ಹಿಂಸಾಚಾರ, ಕ್ರೌರ್ಯ ಅವರಿಗೇನೂ ಹೊಸತಲ್ಲ. ಮೂಲಭೂತವಾದಿಗಳು ತಾವು ಅಲ್ಪಸಂಖ್ಯಾತರಾದ ಭಾಗಗಳಲ್ಲಿ ಸೆಕ್ಯುಲರಿಸಂ ಹೆಸರಿನಲ್ಲಿ ತಮ್ಮ ಅಮಾಯಕತ್ವವನ್ನು ಪ್ರದರ್ಶಿಸಿ, ಬಹುಸಂಖ್ಯಾತರಾದ ಭಾಗಗಳಲ್ಲಿ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ಮಾಡುವುದು ಅವರಿಗೆ ಅಭ್ಯಾಸ.

ಹಾಗಾಗಿ ಪ್ರತಿಭಟನೆ ಶುರುವಾದ ಮೂಲ ಕಾರಣ ಏನೆಂದು ಮರೆಯುವ ರೀತಿಯಲ್ಲಿ ಅಲ್ಪಸಂಖ್ಯಾತರಾದ ಹಿಂದುಗಳ ಮೇಲೆ ದೌರ್ಜನ್ಯ ನಡೆಯಿತು. ಇದು ಸರ್ಕಾರದ ವಿರುದ್ಧ ಎಂದೆನಿಸಿಕೊಂಡ ಪ್ರತಿಭಟನೆಯಾದ ಕಾರಣ ಶೇಕ್ ಹಸೀನಾ ಪ್ರಧಾನಿ ಪದವಿಗೆ ರಾಜೀನಾಮೆ ಕೊಟ್ಟಾಗ ಪ್ರತಿಭಟನೆ ನಿಲ್ಲಬೇಕಾಗಿತ್ತು. ಆದರೆ ಆ ಭ್ರಮೆ ಹಾಗೆಯೇ ಉಳಿಯಿತು. ಏಕೆಂದರೆ ಅದು ಶೇಕ್ ಹಸೀನಾ ವಿರುದ್ಧದ ದಂಗೆಯಲ್ಲ, ಅವರ ಬಗ್ಗೆ ಜನರಿಗೆ ಅಷ್ಟೊಂದು ಅಸಮಾಧಾನ ಇದ್ದರೆ, ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ಶೇಕ್ ಹಸೀನಾ ಗೆಲುವನ್ನು ಸಾಧಿಸುತ್ತಿದ್ದರೇ? ಜನರ ಅಸಮಾಧಾನ ಚುನಾವಣೆಯ ಫಲಿತಾಂಶದಲ್ಲಿ ಕಂಡಿಲ್ಲ ಎಂದ ಮೇಲೆ ಅದು ಬರೀ ಸರ್ಕಾರದ ವಿರುದ್ಧದ ಗಲಭೆ ಹೇಗಾಗುತ್ತದೆ? ವಾಸ್ತವದಲ್ಲಿ ಬಾಂಗ್ಲಾ ಗಲಭೆ ಸರ್ಕಾರದ ಮೇಲಿನ ಅಸಮಾಧಾನ ಮಾತ್ರವಾಗಿರಲಿಲ್ಲ, ಬದಲಾಗಿ ಬಾಂಗ್ಲಾದಲ್ಲಿ ಭಾರತ ವಿರೋಧಿ ಅಲೆ ಏಳುವ ಸೂಚನೆಯಾಗಿತ್ತು, ಬಹುಶಃ ಭಾರತಕ್ಕೆ ಎಚ್ಚರಿಕೆಯ ಕರೆಗಂಟೆ ಅಂದರೂ ತಪ್ಪಾಗದು.

1971ರಲ್ಲಿ ಬಾಂಗ್ಲಾ ಹುಟ್ಟಿಕೊಳ್ಳಲು ಭಾರತ ಬೆಂಬಲ ನೀಡಿತ್ತು, ಆದ್ದರಿಂದ ಅಂದು ಆ ದೇಶದ ಜನನವಾಯಿತು. ಆದರೆ ಈಗ ತನ್ನ ಹುಟ್ಟಿಗೆ ಕಾರಣರಾದವರ ವಿರುದ್ಧ ದ್ವೇಷ ಸಾಧಿಸುತ್ತಿದೆ. ಈ ಮನಸ್ಥಿತಿ ಹುಟ್ಟು ಹಾಕುವುದರಲ್ಲಿ ಜಮಾತ್–ಇ–ಇಸ್ಲಾಂ, ಐಎಸ್‌ಐ (ಇಂಟರ್ ಸರ್ವೀಸಸ್ ಇಂಟಲಿಜೆನ್ಸ್)ದಂತಹ ಮೂಲಭೂತವಾದಿ ಸಂಘಟನೆಗಳು ಪಾತ್ರ ಇದೆ ಎಂಬುದು ಕೇಳಿ ಬಂದಿದೆ. ಶೇಕ್ ಹಸೀನಾ ಅಧಿಕಾರಕ್ಕೆ ಬಂದ ಮೇಲೆ ಭಾರತದ ಜೊತೆಗೆ ಉತ್ತಮ ಸಂಬಂಧವನ್ನಿಟ್ಟುಕೊಂಡಿದ್ದರು. ಅಲ್ಪಸಂಖ್ಯಾತರಿಗೆ ಅಲ್ಲಿ ಬದುಕುವ ಪರಿಸ್ಥಿತಿ ಇತ್ತು, ಒಂದು ವೇಳೆ




ಕೋಮುಗಲಭೆ ಉಂಟಾದರೂ ಅದನ್ನು ನಿಯಂತ್ರಿಸಿ ಅಲ್ಪಸಂಖ್ಯಾತರ ರಕ್ಷಣೆಯ ಹೊಣೆ ಹೊತ್ತಿದ್ದರು. ಹಾಗಾಗಿ ಹಸೀನಾ ಅವಧಿಯಲ್ಲಿ ಅಲ್ಲಿ ಇಸ್ಲಾಂ ಮೂಲಭೂತವಾದಿಗಳ ಕೈವಾಡಗಳು ಸಾಧ್ಯವಾಗಿರಲಿಲ್ಲ. ಶೇಕ್ ಹಸೀನಾ ಅಧಿಕಾರದಿಂದ ಕೆಳಗಿಳಿಯಬೇಕೆಂಬುದು ಅಜೆಂಡಾ ಆದದ್ದು ಹೀಗೆ!

ಬಾಂಗ್ಲಾದೇಶ ಹುಟ್ಟಿಕೊಂಡ ವೇಳೆ ಬರೋಬ್ಬರಿ ಮೂವತ್ತೈದು ಲಕ್ಷ ಹಿಂದುಗಳು ನಿರಾಶ್ರಿತರಾಗಿ ಭಾರತಕ್ಕೆ ಬಂದಾಗ ಭಾರತ ಆಶ್ರಯದಾತವಾಗಿತ್ತು. ಸಹಾಯವನ್ನರಸಿ ಬಂದವರಿಗೆ ಸಹಾಯ ಮಾಡುವುದು ಭಾರತೀಯ ಸಂಸ್ಕೃತಿ. ಅದೂ ಅಲ್ಲದೆ 2010ರಿಂದ ಪ್ರತೀ ವರ್ಷ ಭಾರತ, ಬಾಂಗ್ಲಾದ ಮೂಲಸೌಕರ್ಯದ ಅಭಿವೃದ್ಧಿಗಾಗಿ 8 ಬಿಲಿಯನ್ ಡಾಲರ್‌ಗಳಷ್ಟು ವ್ಯಯಿಸುತ್ತಿದೆ. ಈ ತರಹದ ಸಹಕಾರ ಮಾಡುವ ದೇಶದ ಮೇಲೆ ದ್ವೇಷ ಸಾಧಿಸುವುದೆಂದರೆ ಏನು? ಭಾರತ ವಿರೋಧಿ ಮನಸ್ಥಿತಿ ಅಲ್ಲಿನ ಜನರಲ್ಲಿ ಸೃಷ್ಟಿ ಮಾಡಲು ಭಯೋತ್ಪಾದಕರು, ಉಗ್ರಗಾಮಿ ಶಕ್ತಿಗಳು ಪ್ರಯತ್ನ ಮಾಡುತ್ತಲೇ ಇವೆ. ಅವರ ಅಜೆಂಡಾ ಕಾರ್ಯರೂಪಕ್ಕೆ ತರಲು ಮೀಸಲಾತಿಯ ವಿರುದ್ಧದ ಪ್ರತಿಭಟನೆಯನ್ನು ಸಾಧನವಾಗಿ ಬಳಸಿದ್ದಾರೆ.

ಕಳೆದ ಕೆಲ ವರ್ಷಗಳ ಬೆಳವಣಿಗೆಗಳನ್ನು ನೋಡುವಾಗ ಭಾರತದ ಸುತ್ತಲಿನ ದೇಶಗಳೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಸಮಸ್ಯೆಗೊಳಗಾಗುವುದನ್ನು ನಾವು ಕಾಣುತ್ತಿದ್ದೇವೆ. ಪಕ್ಕದ ಪಾಕಿಸ್ತಾನದಲ್ಲಿ ಹಣದುಬ್ಬರದಿಂದಾಗಿ ಅಲ್ಲಿನ ಜನತೆ ಸಾಕಷ್ಟು ಕಷ್ಟ ಎದುರಿಸಬೇಕಾಯಿತು. ನೇಪಾಳದಲ್ಲಿ ಆದ ಆರ್ಥಿಕ ಹಿನ್ನಡೆ ಅಲ್ಲಿನ ರಾಜಕೀಯ ಅಸ್ಥಿರತೆಗೆ ಕಾರಣವಾಯಿತು. ಶ್ರೀಲಂಕಾ ಸಾಲದ ಸುಳಿಯಲ್ಲಿ ತತ್ತರಿಸಿತು. ಅಫ್ಘಾನಿಸ್ತಾನ ತಾಲೀಬಾನೀ ಉಗ್ರರ ವಶವಾಯಿತು. ಇಂತಹ ಋಣಾತ್ಮಕ ಬೆಳವಣಿಗೆಗಳು ಭಾರತದ ಸುತ್ತಮುತ್ತಲಿನ ದೇಶಗಳಲ್ಲಿ ಆಗುವ ಕಾರಣ ಭಾರತದ ಮೇಲೆ ಪ್ರಭಾವ ಬೀರುತ್ತದೆ. ಇದೇ ಕಾರಣಕ್ಕೆ ಭಾರತದ ಹಿನ್ನಡೆಯನ್ನು ಆಂತರ್ಯದಲ್ಲಿಟ್ಟುಕೊಂಡ ಅಗೋಚರ ವಿದೇಶಿ ಶಕ್ತಿಗಳು ಭಾರತದ ನೆರೆಹೊರೆಯ ದೇಶಗಳನ್ನು ಗುರಿಯಾಗಿಸುತ್ತಿರುವುದು. ಪಾಕಿಸ್ತಾನದ ಆಂತರಿಕ ವೈಫಲ್ಯಗಳು ಅದನ್ನು ಅವನತಿಯ ದಾರಿಯಲ್ಲಿ ಮುಂದೆ ಹೋಗುವಂತೆ ಮಾಡಿದೆ. ಆದರೆ ಪಾಕ್ ಹೊರತಾಗಿ ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಪತನವಾದ ದೇಶಗಳೆಲ್ಲವೂ ಭಾರತದ ಜೊತೆಗೆ ಸ್ನೇಹವನ್ನು ಕಾಯ್ದುಕೊಂಡಿದ್ದವು. ಅದೇ ಕಾರಣಕ್ಕೆ ಅವುಗಳನ್ನು ಗುರಿಯಾಗಿಸಿ ಜಗತ್ತಿನ ಪ್ರಮುಖ ರಾಷ್ಟ್ರಗಳು ಆಟವಾಡುತ್ತಿವೆ. ಅಂದರೆ ಇದು ಭಾರತವನ್ನು ಏಕಾಂಗಿಯಾಗಿಸಲು ಮಾಡುವ ಪ್ರಯತ್ನ. ಸುತ್ತಲಿನ ರಾಷ್ಟ್ರಗಳ ಪರಿಸ್ಥಿತಿ ಹದೆಗಟ್ಟು ಹೋಗುವಂತೆ ಮಾಡಿ, ಭಾರತದ ಮೇಲೆ ಋಣಾತ್ಮಕ ಪರಿಣಾಮ ಬೀರುವಂತೆ ಮಾಡುವುದು ಅವುಗಳ ಉದ್ದೇಶ. ಆಂಗ್ಲರು ಅನುಸರಿಸುತ್ತಿದ್ದ ರಿಂಗ್ ಫೆನ್ಸ್ ಪಾಲಿಸಿಯ ರೀತಿಯಲ್ಲಿ ಬಫರ್ ವಲಯವನ್ನು ಸೃಷ್ಟಿಸಿ ಮಧ್ಯೆ ಇರುವ ಭಾರತವನ್ನು ಬಲಹೀನಗೊಳಿಸುವುದನ್ನು ಚೀನಾದಂತಹ ಕುತಂತ್ರಿ ದೇಶಗಳು ಬಯಸುತ್ತಿವೆ.

ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದಬ್ಬಾಳಿಕೆ ಹೊಸತೇನಲ್ಲ. 1947ರಲ್ಲಿ ಪೂರ್ವ ಪಾಕಿಸ್ತಾನ ಎಂದೆನಿಸಿದ್ದ ಈಗಿನ ಬಾಂಗ್ಲಾದೇಶದಲ್ಲಿ 28% ಹಿಂದುಗಳಿದ್ದರು, ಈಗ ಶೇಕಡ 8ಕ್ಕೆ ಇಳಿದಿದೆ. ಪ್ರಸ್ತುತ 1.4 ಕೋಟಿ ಹಿಂದು ಜನಸಂಖ್ಯೆ, ಸುಮಾರು ಒಂದು ಲಕ್ಷದಷ್ಟು ದೇಗುಲಗಳಿವೆ. ಮೊನ್ನೆ ನಡೆದ ಗಲಭೆಯಲ್ಲಿ ನಾಶವಾದದ್ದು ಐವತ್ತರಷ್ಟು ದೇಗುಲಗಳು. ಲೆಕ್ಕ ನೋಡುವಾಗ ತುಂಬಾ ಕಡಿಮೆ ಅನಿಸಿದರೂ, ಅದರ ಹಿಂದೆ ಕೆಲಸ ಮಾಡುವ ಕಾಣದ ಕೈಗಳ ಹಿಂದಿನ ಉದ್ದೇಶ ಭಾರತದಲ್ಲೂ ಅದೇ ರೀತಿಯ ಅಶಾಂತಿಯ ವಾತಾವರಣ ಸೃಷ್ಟಿ ಮಾಡುವುದನ್ನು ಸ್ಪಷ್ಟಪಡಿಸುತ್ತದೆ. ಸಿಎಎ, ಕೃಷಿ ಕಾಯ್ದೆಯ ಸಂದರ್ಭದಲ್ಲಿ ದೇಶದಲ್ಲಿ ಉಂಟಾದ ಗಲಭೆ ಇದಕ್ಕೆ ದೃಷ್ಟಾಂತಗಳು.

ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನಕ್ಕೆ ಹೋಲಿಸಿದಾಗ ಉತ್ತಮ ಸ್ಥಿತಿಯಲ್ಲಿದ್ದ ಬಾಂಗ್ಲಾದೇಶದಲ್ಲಿ ಉಂಟಾದ ಅರಾಜಕತೆಯಲ್ಲಿ ಇಸ್ಲಾಂ ಮೂಲಭೂತವಾದಿಗಳ ಪಾಲು ಏಕಿದೆ? ಭಾರತ ಮತ್ತು ನೇಪಾಳದ ಹೊರತಾಗಿ ಅತೀ ಹೆಚ್ಚು ಹಿಂದುಗಳಿರೋ ದೇಶ ಬಾಂಗ್ಲಾದೇಶ. ಹಾಗಾಗಿ ಇದೊಂದು ಮುಸ್ಲಿಂ ದೇಶವಾದರೂ ಅವರ ಕೆಟ್ಟದೃಷ್ಟಿ ಅದರ ಮೇಲೆ ಬಿತ್ತು. ಬಾಂಗ್ಲಾದಲ್ಲಿ ಬೆಂಕಿ ಹತ್ತಿಕೊಂಡರೆ ಭಾರತ ಯಾಕೆ ಪ್ರತಿಕ್ರಯಿಸುತ್ತದೆ? ಎಂಬ ಪ್ರಶ್ನೆಗೆ ಬಹುತೇಕರಿಗೆ ಕಾಡುತ್ತಿದೆ.

ಭಾರತ – ಬಾಂಗ್ಲಾ ದೇಶಗಳ ಗಡಿಯನ್ನು ಅವಲೋಕಿಸಿದಾಗ ಗಡಿಯಲ್ಲಿರುವ ಸಂಕೀರ್ಣತೆ ತಿಳಿಯುತ್ತದೆ. ಈ ಗಡಿಯಲ್ಲಿ 30ಕ್ಕೂ ಹೆಚ್ಚು ನದಿಗಳಿವೆ. ಹೀಗಾಗಿ ಈ ಭಾಗದಲ್ಲಿ ಭಾರತ, ಬಾಂಗ್ಲಾದೇಶದ ನಡುವಿನ ಗಡಿ ಭದ್ರಪಡಿಸುವುದು ಕ್ಲಿಷ್ಟಕರ. ಹಾಗಾಗಿ ಅಲ್ಲಿ ಆಶಾಂತಿಯ ಪರಿಸ್ಥಿತಿ ಎದುರಾದಾಗಲೆಲ್ಲ ಅಲ್ಲಿನ ನಾಗರಿಕರಿಗೆ ನೆನಪಾಗುವುದು ನಮ್ಮ ಭಾರತ. ಗಲಭೆಗಳು, ನಿರುದ್ಯೋಗ ಹೀಗೆ ಸಮಸ್ಯೆಗಳು ಬಂದಾಗ ಹಿಂದುಗಳು ಮಾತ್ರವಲ್ಲ, ಮುಸ್ಲಿಮರು ಸಹ ಆಶ್ರಯ ಬಯಸಿ ಭಾರತಕ್ಕೆ ಬರುತ್ತಾರೆ. ಹೀಗಾಗಿ ಬರುವ ನಿರಾಶ್ರಿತರನ್ನು ನಿಭಾಯಿಸುವುದು ಸವಾಲಿನ ಕೆಲಸ. ದಿನೇ ದಿನೇ ನಮ್ಮ ದೇಶದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಮೂಲಸೌಕರ್ಯಗಳನ್ನು ಒದಗಿಸುವುದರ ಜೊತೆಗೆ ಹೊರ ದೇಶದಿಂದ ಬರುವ ನಿರಾಶ್ರಿತರಿಗೆ ಆಶ್ರಯ ನೀಡುವುದು ಸುಲಭದ ಸಂಗತಿ ಅಲ್ಲ. ದೇಶದ ಆಂತರಿಕ ಸುರಕ್ಷತೆ, ರಾಜತಾಂತ್ರಿಕತೆ, ವಿದೇಶಾಂಗ ನೀತಿ. ಎಲ್ಲವನ್ನೂ ಗಮನದಲ್ಲಿರಿಸಿ ಸರ್ಕಾರ ಕಾರ್ಯನಿರ್ವಹಿಸಬೇಕು.

ಭಾರತ ವಿರೋಧಿ ಶಕ್ತಿಗಳು ಬಾಂಗ್ಲಾದೇಶದಲ್ಲಿ ಸಕ್ರಿಯವಾಗಿರುವುದನ್ನು ಗಲಭೆಯೇ ಸೂಚಿಸಿದೆ. ಭಯೋತ್ಪಾದಕರು ಬಾಂಗ್ಲಾದೇಶವನ್ನು ತಮ್ಮ ತಂಗುದಾಣವಾಗಿ ಬಳಸಿ ಬಾಂಗ್ಲಾ ಗಡಿಯ ಮೂಲಕ ಭಾರತದ ಗಡಿಯೊಳಗೆ ನುಸುಳುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಒಂದು ವೇಳೆ ಭಯೋತ್ಪಾದಕರು ಈ ಸೂತ್ರವನ್ನು ಉಪಯೋಗಿಸಿದಲ್ಲಿ ಭಾರತಕ್ಕೆ ಭದ್ರತಾ ದೃಷ್ಟಿಯಲ್ಲಿ ಅತಿ ದೊಡ್ಡ ಸವಾಲಾಗಲಿದೆ. ಹಾಗಾಗಿ ನೆರೆಮನೆಯ ಬೆಂಕಿ ಆರುವವರೆಗೆ ನಮ್ಮ ಮನೆಯಲ್ಲೂ ಅಭದ್ರತಾ ಭಾವ ಇದ್ದೇ ಇರುತ್ತದೆ. ಆದರೆ ಈ ಗಲಭೆಯ ವೇಳೆಯಲ್ಲಿ ಬಾಂಗ್ಲಾದೇಶದ ಹಿಂದುಗಳ ಪರವಾಗಿ ದನಿಯೆತ್ತಿದ್ದು ಭಾರತೀಯರು ಮಾತ್ರವಲ್ಲ, ಯುಕೆ, ಆಸ್ಟ್ರೇಲಿಯಾದ ಪಾರ್ಲಿಮೆಂಟ್‌ನಲ್ಲಿರುವ ಭಾರತೀಯ ಮೂಲದ ನಾಯಕರು ಕೂಡಾ ಹಿಂಸಾಚಾರವನ್ನು ಖಂಡಿಸುವ ಮೂಲಕ ಭಾರತದ ಪರ ಮಾತನಾಡಿದರು. ಇದಕ್ಕೆ ಕಾರಣ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬದಲಾಗಿರುವ ಭಾರತದ ಸ್ಥಾನಮಾನ. ಸಮರ್ಥ ನಾಯಕತ್ವದಡಿಯಲ್ಲಿ ಸುದೃಢವಾಗಿರುವ ಭಾರತದ ಕಡೆಗೆ ಜಗತ್ತು ನೋಡುವ ದೃಷ್ಟಿಕೋನದ ಬದಲಾವಣೆ! ದಶಕದ ಹಿಂದೆ ತಲೆ ಕೆಳಗೆ ಮಾಡಿ ಕುಳಿತುಕ್ಕೊಳ್ಳುತ್ತಿದ್ದ ಆ ಭಾರತ ಈಗಿಲ್ಲ, ಇಂದಿನ ಭಾರತ ಸಶಕ್ತ ಭಾರತ, ನ್ಯೂಟನನ ಚಲನೆಯ ಮೂರನೇಯ ನಿಯಮದಂತೆ ಕ್ರಿಯೆಗೆ ಸಮಾನ ಮತ್ತು ವಿರುದ್ಧವಾದ ಪ್ರತಿಕ್ರಿಯೆ ನೀಡುತ್ತದೆ. ಆದ್ದರಿಂದ ನಂಬರ್.1 ಆಗುವ ಕನಸು ಹೊತ್ತ ರಾಷ್ಟ್ರಗಳು ಭಾರತದ ಸುತ್ತಲಿರುವ ದೇಶಗಳಲ್ಲಿ ಕೆಂಡವೂದಿ ಭಾರತದಲ್ಲಿ ಯಾವಾಗ ಬೆಂಕಿ ಹತ್ತಿಕೊಳ್ಳುತ್ತದೆ ಎಂದು ಕಾಯುತ್ತಲೇ ಇವೆ. ಹೀಗಾಗಿ ಇದನ್ನರಿತು ಭಾರತೀಯ ಪ್ರಜೆಗಳಾದ ನಾವು ಎಚ್ಚರಿಕೆಯಿಂದಿರಬೇಕು, ರಾಷ್ಟ್ರದ ಸಾರ್ವಭೌಮತೆಯನ್ನು ಕಾಪಾಡಲು ಪಣತೊಡಬೇಕು. ■

## ಸಂಸ್ಮರಣೆ

# ಸುಬ್ರಹ್ಮಣ್ಯ ಭಾರತಿ (11 ಡಿಸೆಂಬರ್, 1882–11 ಸೆಪ್ಟಂಬರ್, 1921)

ಸುಬ್ರಹ್ಮಣ್ಯ ಭಾರತಿ ಕೇವಲ ಮೂವತ್ತೊಂಬತ್ತು ವರ್ಷಗಳ ಕಾಲ ಬದುಕಿದ್ದ ಮಹಾಕವಿ. ರಾಷ್ಟ್ರೀಯತೆಯ ಪ್ರಜ್ಞೆ ಇದ್ದ ವ್ಯಕ್ತಿ. ಅವರು ತಮ್ಮ ಅಲ್ಪಾವಧಿಯ ಬದುಕಿನಲ್ಲಿಯೇ ತಮಿಳು ಸಾಹಿತ್ಯಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದವರು. ಸಾಹಿತ್ಯಕ್ಕೆ ಮಾನವೀಯತೆಯ ಸ್ಪರ್ಶ ನೀಡಿ ವಿಶ್ವಮಾನ್ಯ ಎನಿಸಿಕೊಂಡವರು. ತಮ್ಮ ಬರಹ ಮತ್ತು ಮಾತಿನ ಮೂಲಕವೇ ಕ್ರಾಂತಿಯನ್ನು ಹುಟ್ಟು ಹಾಕಿದವರು. ಅಂದಿನ ಇಡೀ ಸಮಾಜವನ್ನು ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರೇಪಿಸಿ ಸ್ವಾತಂತ್ರ್ಯದ ಕಿಚ್ಚನ್ನು ಹೊತ್ತಿಸಿದವರು. ನ್ಯಾಯ, ಸಮಾನತೆ, ಸಾಮಾಜಿಕ ಕಾಳಜಿ ಮತ್ತು ದೇಶಭಕ್ತಿ ಭಾರತಿಯಾರ್ ಬರಹಗಳ ಮೂಲಧಾತುವಾಗಿತ್ತು. ಬರಹದಿಂದ ಮಾತ್ರ ದೇಶ ಮತ್ತು ಸಮಾಜವನ್ನು ಒಗ್ಗೂಡಿಸಲು ಸಾಧ್ಯ ಎಂದು ಅವರು ನಂಬಿದ್ದರು.

ಕವಿ, ಸ್ವಾತಂತ್ರ್ಯ ಹೋರಾಟಗಾರ ಮತ್ತು ಸಮಾಜ ಸುಧಾರಕ ಎನಿಸಿಕೊಂಡಿದ್ದ ಸುಬ್ರಹ್ಮಣ್ಯ ಭಾರತಿ ಡಿಸೆಂಬರ್ 11, 1882ರಲ್ಲಿ ಜನಿಸಿದವರು. ಚಿನ್ನಸ್ವಾಮಿ ಸುಬ್ರಹ್ಮಣ್ಯ ಐಯ್ಯರ್ ಮತ್ತು ಎಲಕ್ಕುಮಿ ಅಮ್ಮಾಳ್ ಭಾರತಿಯಾರ್ ಅವರ ತಂದೆ–ತಾಯಿ. ದುರಾದೃಷ್ಟವಶಾತ್ ಸುಬ್ರಹ್ಮಣ್ಯ ಭಾರತಿ ತಮ್ಮ ಐದನೇ ವಯಸ್ಸಿನಲ್ಲಿ ತಾಯಿಯನ್ನು ಮತ್ತು ಹದಿನಾರನೇ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡರು. ಸಂಕಟದ ವಾತಾವರಣದ ನಡುವೆಯೂ ಭಾರತಿಯಾರ್ ಭರವಸೆಯ ಬದುಕನ್ನು ಕಟ್ಟಿಕೊಳ್ಳಲು ಮುಂದಾದರು. ಬದುಕು ಬಂದಂತೆ ಸ್ವೀಕರಿಸುತ್ತಾ ಕಲಿಕೆಗೆ ತಮ್ಮನ್ನು ಒಡ್ಡಿಕೊಂಡರು. ಇಂಗ್ಲಿಷ್, ಹಿಂದಿ, ತೆಲುಗು, ಬೆಂಗಾಲಿ ಮತ್ತು ಸಂಸ್ಕೃತ ಭಾಷೆಗಳನ್ನು ಕಲಿತರು, ಪರಿಣಿತರಾದರು. ಅಷ್ಟರೊಳಗಾಗಲೇ ಭಾರತಿಯಾರ್ ಅಧ್ಯಾತ್ಮ ಮತ್ತು ರಾಷ್ಟ್ರೀಯತೆಯ ಪ್ರಭಾವಕ್ಕೆ ಒಳಗಾಗಿದ್ದರು. ದೇಶಭಕ್ತಿಯ ಬೀಜವನ್ನು ತಮ್ಮ ಎದೆಯೊಳಗೆ ಬಿತ್ತಿಕೊಂಡಿದ್ದರು. ಈ ನಡುವೆ ಸಮಾಜದ ಒಂದಿಷ್ಟು ಅನಿಷ್ಟ ಪದ್ಧತಿಗಳನ್ನು ವಿರೋಧಿಸುತ್ತಾ, ಮಹಿಳೆಯರ ರಕ್ಷಣೆಗಾಗಿಯೂ ಹೋರಾಟ ನಡೆಸುತ್ತಾ ಭಾರತಿಯಾರ್ ಒಬ್ಬ ಸಮರ್ಥ ಹೋರಾಟಗಾರನಾಗಿಯೂ ಗುರುತಿಸಿಕೊಂಡಿದ್ದರು. ಜಾತಿ ವ್ಯವಸ್ಥೆಯ ವಿರುದ್ಧದ ಅವರ ಹೋರಾಟ ಮತ್ತು ಕ್ರಾಂತಿಕಾರಿ ನಡೆಯಿಂದಾಗಿ ಅಂದಿನ ಸಮಾಜದಲ್ಲಿ ಹೊಸ ಬದಲಾವಣೆಯ ಗಾಳಿ ಬೀಸಿತು.



ಬಹುಮುಖ್ಯವಾಗಿ ಸುಬ್ರಹ್ಮಣ್ಯ ಅವರ ಕವಿತೆಗಳು, ರಾಷ್ಟ್ರಗೀತೆ, ದೇಶಭಕ್ತಿಗೀತೆ ಮತ್ತು ಕ್ರಾಂತಿಕಾರಿ ಗೀತೆಗಳು ಸಮಾಜವನ್ನು ಒಗ್ಗೂಡಿಸಲು ಸಹಕರಿಸಿದವು. ಕವಿತೆ ರಚನೆಯನ್ನು ತೀರಾ ಗಂಭೀರವಾಗಿ ಪರಿಗಣಿಸಿದ್ದ ಸುಬ್ರಹ್ಮಣ್ಯ ತಮ್ಮ ಕವಿತ್ವದ ಶಕ್ತಿಯಿಂದಾಗಿ ರಾಷ್ಟ್ರಕವಿಯಾದರು.

ಮುಂದೆ ಅವರು ಧಾರ್ಮಿಕ ಮತ್ತು ದಾರ್ಶನಿಕ ಸಾಹಿತ್ಯ ರಚನೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡರು. ಶಾಸ್ತ್ರೀಯ ಸಂಗೀತ ರಚನೆಗಳು ಸುಬ್ರಹ್ಮಣ್ಯ ಅವರಿಗೆ ಸಾಕಷ್ಟು ಹೆಸರು ತಂದುಕೊಟ್ಟಿತು. ಅನುವಾದದಲ್ಲೂ ಸಿದ್ಧ ಹಸ್ತರಾದರು. ಭಾಷೆಗಳ ಸಂಸರ್ಗಕ್ಕೆ ಶ್ರಮಿಸಿದರು. ಇಡೀ ದೇಶ ಅವರನ್ನು ರಾಷ್ಟ್ರೀಯತಾವಾದಿ ಮತ್ತು ಮಹಾನ್ ಕವಿ ಎಂದು ಪರಿಗಣಿಸಿತು. ಸುಬ್ರಹ್ಮಣ್ಯ ಭಾರತಿ ಅವರ ಮೇಲೆ ಸ್ವಾಮಿ ವಿವೇಕಾನಂದ ಮತ್ತು ಸೋದರಿ ನಿವೇದಿತಾ ಅವರ ಪ್ರಭಾವವಿತ್ತು. ಮುಂದೆ ಸುಬ್ರಮಣ್ಯ ಅವರಿಂದ ಸಾಕಷ್ಟು ಮಂದಿ ಪ್ರಭಾವಕ್ಕೆ ಒಳಗಾದರು.

ಜನತೆಯ ಕವಿ ಎನಿಸಿಕೊಂಡಿದ್ದ ಬಹುಶ್ರುತ ಪ್ರತಿಭೆಯ, ದೇಶಭಕ್ತಿ ಮತ್ತು ಹೋರಾಟವನ್ನು ಬದುಕಾಗಿಸಿಕೊಂಡಿದ್ದ ಸುಬ್ರಹ್ಮಣ್ಯ ಭಾರತಿ ಅವರು ಸೆಪ್ಟಂಬರ್ 11, 1921 ರಂದು ತಮ್ಮ ಅತೀ ಕಡಿಮೆ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದರು. ದೇಶ ಕಂಡ ಸಾಹಿತ್ಯ ದಿಗ್ಗಜ ಮತ್ತು ಅಪ್ಪಟ ದೇಶಭಕ್ತ ತಮ್ಮ ಸಾಹಿತ್ಯ ಮತ್ತು ವಿಚಾರಧಾರೆಗಳಿಂದ ಈಗಲೂ ಜೀವಂತವಾಗಿ ಉಳಿದಿದ್ದಾರೆ.

# ಸೇವಾಬಸ್ತಿಯ ವಿದ್ಯಾರ್ಥಿಗಳ ಬಾಳ ಹಣತೆ ಬೆಳಗುತ್ತಿರುವ ಶ್ರೀ ಗುರೂಜಿ ಜ್ಞಾನಮಂದಿರ.

ಗುಜರಾತಿನ ಮಣಿನಗರದ ಕಾಂಕರಿಯಾ ರಾಮಾನಂದ ಕೋರ್ಟ್‌ನಲ್ಲಿರುವ ಸೇವಾಬಸ್ತಿಯೊಂದರ ಚಹಾದಂಗಡಿಯಲ್ಲಿ ತಾಯಿಯ ಜೊತೆ ಗ್ರಾಹಕರಿಗೆ ಚಹಾ ನೀಡುತ್ತಿದ್ದ ಹಾಗೂ ಮದ್ಯವ್ಯಸನಿಯಾಗಿದ್ದ ತಂದೆಯಿಂದ ಬೆಂಬಲ ಸಿಗದೆ ಹತ್ತನೇ ತರಗತಿ ಪಾಸಾಗಬಹುದೇ ಎಂಬ ಯೋಚನೆಯಲ್ಲಿದ್ದ ಮನೀಶಾ, ಉತ್ತಮ ಅಂಕಗಳೊಂದಿಗೆ ಪಿಯುಸಿ ಉತ್ತೀರ್ಣಳಾಗಿ ಇಂದು ಫ್ಯಾಷನ್ ಡಿಸೈನರ್ ಆಗಿದ್ದಾಳೆ. ಓದಬೇಕೆಂಬ ಮಹದಾಸೆಯಿದ್ದರೂ ಮನೆಯ ಅನಾನುಕೂಲತೆಗಳಿಂದ ಮದುವೆ ಮನೆಗಳಲ್ಲಿ ಡೋಲು ಬಾರಿಸಿ ಜೀವನ ಸಾಗಿಸುತ್ತಿದ್ದ ಚೇತನ್, ಇಂದು, ಮಣಿನಗರದಲ್ಲಿ ಪ್ರಸಿದ್ಧ ಫಿಸಿಯೋಥೆರಪಿಸ್ಟ್ ಆಗಿದ್ದಾರೆ. ಟೈಫಾಯಡ್‌ನಿಂದ ಬಳಲುತ್ತಿದ್ದ ಮಿಲ್ಲತ್ ನಗರದ ಬಸ್ತಿಯಲ್ಲಿ ವಾಸಿಸುವ ಸಲೀಂ ಎಂಬ ಹುಡುಗನಿಗೆ ಪೂರ್ತಿ ಚಿಕಿತ್ಸೆ ಕೊಡಿಸಿದ ಕಾರಣ ಇಂದು, ಮಣಿನಗರದ ಮಿಲ್ ಒಂದರಲ್ಲಿ ನೌಕರಿ ಮಾಡುತ್ತಾ ತನ್ನ ಇಡೀ ಕುಟುಂಬದ ಜವಾಬ್ದಾರಿ ಹೊತ್ತಿದ್ದಾನೆ. ಈ ಮುಸ್ಲಿಂ ಯುವಕ, ಇಂದು ಅವನು ತಲೆಬಾಗುವುದು ತನ್ನ ದೇವರಿಗೆ ಹಾಗೂ ಸಂಘದ ಸ್ವಯಂಸೇವಕರೂ ಹಾಗೂ ತನ್ನ ಶಿಕ್ಷಕರೂ ಆಗಿರುವ ಕನುಭಾಯಿ ಅವರಿಗೆ ಮಾತ್ರ!.

ಸುಖಾಂತ್ಯ ಕಂಡ ಈ ಮೂರು ಬೇರೆ ಬೇರೆ ಪ್ರಸಂಗಗಳ ಮೂಲವೇ ಶ್ರೀ ಗುರೂಜಿ ಜ್ಞಾನ ಮಂದಿರ. ಮಣಿನಗರದ ಮುನ್ಸಿಪಲ್ ಶಾಲೆಯಲ್ಲಿ ಸಂಜೆ ಐದರಿಂದ ಎಂಟು ಗಂಟೆಯವರೆಗೆ ನಡೆಯುವ ಈ ಟ್ಯೂಷನ್ ಸೆಂಟರ್ ಯಾವುದೋ ಸಾಧಾರಣ ತರಬೇತಿ ಕೇಂದ್ರವಲ್ಲ, ಬದಲಾಗಿ ಇದು ಬಡ ಮಕ್ಕಳ ಬದುಕಿನಲ್ಲಿ ಶಿಕ್ಷಣ, ಸಂಸ್ಕಾರ ಮತ್ತು ಸ್ವಾವಲಂಬನೆಗಳ ಬೆಳಕು ಚೆಲ್ಲುವ ಕೇಂದ್ರವಾಗಿದೆ.

ಸಂಘದ ನಿಕಟಪೂರ್ವ ಶಾಖಾ ಸೇವಾ ಕಾರ್ಯಕರ್ತರಾಗಿದ್ದ ಕನುಭಾಯಿ ರಾಥೋಡ್‌ರವರು ಹಾಗೂ ಪ್ರಸ್ತುತ ಭಾಗ ಸೇವಾಪ್ರಮುಖರಾಗಿರುವ ಮಧುಭಾಯಿ ಬಾರೋಟ್ ಇವರೀರ್ವರ ಪ್ರಯತ್ನದಿಂದ 14 ವರ್ಷಗಳ ಹಿಂದೆ ಜನ್ಮ ತಾಳಿರುವ ಈ ಟ್ಯೂಷನ್ ಸೆಂಟರ್‌ನಲ್ಲಿ ವಿದ್ಯಾರ್ಥಿಗಳು ಯಾವುದೇ ಶುಲ್ಕವನ್ನು ಪಾವತಿಸಬೇಕಿಲ್ಲ ಹಾಗೂ ಇಲ್ಲಿನ ಶಿಕ್ಷಕರು ಯಾವುದೇ ಸಂಬಳವನ್ನೂ ಪಡೆಯುವುದಿಲ್ಲ. ಸೇವೆಯೆಂಬ ಧ್ಯೇಯವೊಂದೇ ಎಲ್ಲ ಸಹವರ್ತಿಗಳನ್ನು ಒಗ್ಗೂಡಿಸಿದೆ.

ಕನುಭಾಯಿಯವರು ಗಣಿತ ಮತ್ತು ವಿಜ್ಞಾನ ವಿಷಯಗಳ ಪುಸ್ತಕಗಳನ್ನು ಸೇವಾಬಸ್ತಿಗಳಲ್ಲಿ ಉಚಿತವಾಗಿ ಹಂಚುತ್ತಿದ್ದರು. ಆದರೆ, ಅಲ್ಲಿನ ವಿದ್ಯಾರ್ಥಿಗಳಿಗೆ ಅವುಗಳಿಂದ ಏನನ್ನೂ ಕಲಿಯಲು ಆಗುತ್ತಿರಲಿಲ್ಲ. ನಿಯಮಿತವಾಗಿ ನಡೆಯದ ಸರ್ಕಾರಿ ಶಾಲೆಯ ಬೋಧನೆಯಿಂದಾಗಿ ಮಕ್ಕಳು ಹತ್ತನೇ ತರಗತಿ ಪಾಸಾಗುವುದೂ ದುಸ್ತರವಾಗಿತ್ತು. ಹಾಗಾಗಿ ವಿದ್ಯಾರ್ಥಿಗಳ ಕಲಿಕೆಯ ಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ 2009ರಲ್ಲಿ ಶ್ರೀ ಗುರೂಜಿ ಜ್ಞಾನ ಮಂದಿರ ಎಂಬ ಟ್ಯೂಷನ್ ಸೆಂಟರ್ ಸ್ವಯಂಸೇವಕರೊಬ್ಬರ ಮನೆಯ ಸಣ್ಣ ಕೊಠಡಿಯಲ್ಲಿ ಕೇವಲ ಏಳು ಮಕ್ಕಳಿಂದ ಶುರುವಾಯಿತು. ಕ್ರಮೇಣ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ತರಗತಿಗಳ ಸಂಖ್ಯೆಯೂ ಏರತೊಡಗಿತ್ತು. ಆಗ, ಆರಾಧನಾ ಪಬ್ಲಿಕ್ ಸ್ಕೂಲ್ ಎಂಬ ಖಾಸಗಿ ಶಾಲೆಯೂ, ಈ ಟ್ಯೂಷನ್‌ಗಾಗಿ ಸಂಜೆ 5ರಿಂದ 8ರವರೆಗೆ, ತನ್ನ ಕೊಠಡಿಗಳನ್ನು ಉಚಿತವಾಗಿ ತೆರೆದಿಟ್ಟಿತು.

ಅನೇಕ ವರ್ಷಗಳಿಂದ ಇಲ್ಲಿ ಬೋಧಿಸುತ್ತಿರುವ, ರಾಷ್ಟ್ರಪತಿ ಪುರಸ್ಕೃತ ಶಿಕ್ಷಕರಾದ ಜಯೇಶ್ ಟಕ್ಕರ್ ಹೇಳುವಂತೆ– ಇಲ್ಲಿ ಮಕ್ಕಳನ್ನು ಅನ್ಯಾನ್ಯ ಚಟುವಟಿಕೆಗಳಲ್ಲೂ ತೊಡಗಿಸಲಾಗುತ್ತದೆ. ಗುರುಪೂರ್ಣಿಮೆ, ರಕ್ಷಾಬಂಧನ, ಶ್ರೀಕೃಷ್ಣ ಜನ್ಮಾಷ್ಟಮಿ, ನವರಾತ್ರಿ ಮುಂತಾದ ಎಲ್ಲಾ ಹಬ್ಬಗಳನ್ನು ಇಲ್ಲಿ ಮಕ್ಕಳೊಂದಿಗೆ ಆಚರಿಸಲಾಗುತ್ತದೆ. ಅಷ್ಟೇ ಅಲ್ಲ, ಆಗಾಗ್ಗೆ ಧಾರ್ಮಿಕ ಪ್ರಬಂಧ ಬರಹ, ಚರ್ಚೆ, ದೇಶಭಕ್ತಿ ಗೀತೆ, ಕಥೆ ಹೇಳುವುದು ಮೊದಲಾದ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಮಕ್ಕಳಿಗೆ ಬೇರೆ ಬೇರೆ ಐತಿಹಾಸಿಕ ಸ್ಥಳಗಳ ಪರಿಚಯದ ಜೊತೆಗೆ ಅನೇಕ ಸಾಮಾಜಿಕ ಕಾರ್ಯಗಳಲ್ಲೂ ಭಾಗಿಯಾಗುವಂತೆ ಮಾಡಲಾಗಿದೆ. ಹತ್ತನೇ ತರಗತಿ ಹಾಗೂ ಪಿಯುಸಿ ಮುಗಿಸಿದ ವಿದ್ಯಾರ್ಥಿಗಳಿಗಾಗಿ ಉದ್ಯೋಗ–ಮಾಹಿತಿ ಮೇಳಗಳನ್ನೂ ಆಯೋಜಿಸಲಾಗುತ್ತದೆ.




ಮೊದಲು ಕೇವಲ ಹತ್ತನೇ ತರಗತಿಯವರಿಗೆ ಇಲ್ಲಿ ಪಾಠ ನಡೆಯುತ್ತಿತ್ತು. ಅಗತ್ಯ ತಲೆದೋರಿದಂತೆ, ಇದೀಗ ಒಂಭತ್ತರಿಂದ ಹನ್ನೆರಡನೆಯ ತರಗತಿಯವರೆಗೆ ಆರಂಭಿಸಲಾಗಿದೆ. ಮಣಿನಗರದ ಮುನ್ಸಿಪಲ್ ಶಾಲೆಯ ಆವರಣದಲ್ಲಿ ನಡೆಯುತ್ತಿರುವ ಶ್ರೀ ಗುರೂಜಿ ಜ್ಞಾನಮಂದಿರದಲ್ಲಿ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಖೋಖರಾ, ಘೋಡಾಸರ್ ವಟ್ವಾ, ಬೆಹರಾಮಪುರಾಗಳಂತಹ ದೂರದೂರದ ಪ್ರದೇಶಗಳಿಂದಲೂ ವಿದ್ಯಾರ್ಥಿಗಳು ಓದಲೆಂದು ಇಲ್ಲಿಗೆ ಬರುತ್ತಾರೆ. ಕೆಲ ಮಕ್ಕಳಂತೂ ಕಲಿಯುವ ಆಸಕ್ತಿಯಿಂದ ಹತ್ತು ಕಿಲೋಮೀಟರ್ ಸೈಕಲ್ ತುಳಿದುಕೊಂಡೇ ಬರುತ್ತಾರೆ. ವಾಸ್ತವದಲ್ಲಿ ಶ್ರೀ ಗುರೂಜಿ ಜ್ಞಾನಮಂದಿರವನ್ನು ಶಿಕ್ಷಣ, ಸಂಸ್ಕಾರ ಹಾಗೂ ಮಾಹಿತಿಗಳ ತ್ರಿವೇಣೀ ಸಂಗಮ ಎಂದರೆ ಅದು ಅತಿಶಯೋಕ್ತಿಯಲ್ಲ.

## ರಾಷ್ಟ್ರೀಯ ಸಂಪತ್ತುಗಳನ್ನು ರಕ್ಷಿಸುವುದು

ರಾಷ್ಟ್ರೀಯ ಸಂಪತ್ತುಗಳು ಆ ನೆಲದ ಕಥೆಯನ್ನು ಹೇಳುತ್ತವೆ. ಅದರ ಗತವೈಭವವನ್ನು, ಎದುರಿಸಿದ ಸಂಕಷ್ಟಗಳನ್ನು ಸಾರುತ್ತವೆ. ಇತಿಹಾಸದ ಪಾಠಗಳಿಂದ ಭವಿಷ್ಯವನ್ನು ಕಟ್ಟಿಕೊಳ್ಳಬೇಕಾದ ರಾಷ್ಟ್ರಕ್ಕೆ ಅವುಗಳನ್ನು ತಿಳಿಸುವ ರಾಷ್ಟ್ರೀಯ ಸಂಪತ್ತುಗಳ ರಕ್ಷಣೆ ಅತ್ಯಗತ್ಯ. ಐತಿಹಾಸಿಕ ಸ್ಮಾರಕಗಳು ಈ ನಾಡಿನ ಮೌಲ್ಯಗಳು, ನಂಬಿಕೆಗಳು ಮತ್ತು ಸಾಧನೆಗಳನ್ನು ಒಳಗೊಂಡ ಕೊಂಡಿಗಳಾಗಿವೆ. ಅವುಗಳನ್ನು ರಕ್ಷಿಸುವುದು ಸಮಾಜದ ಸಾಂಸ್ಕೃತಿಕ ಗುರುತನ್ನು ಮತ್ತು ಪರಂಪರೆಯನ್ನು ರಕ್ಷಿಸಲು ಸಹಾಯ ಮಾಡುತ್ತದೆ. ರಾಷ್ಟ್ರೀಯ ಸ್ಮಾರಕಗಳು ಬಯಲು ವಸ್ತುಸಂಗ್ರಹಾಲಯಗಳಾಗಿ ಕಾರ್ಯನಿರ್ವಹಿಸುವ ಜೊತೆಗೆ ಯುವಪೀಳಿಗೆಗೆ ಪ್ರಮುಖ ಶೈಕ್ಷಣಿಕ ಅವಕಾಶಗಳನ್ನು ಒದಗಿಸುತ್ತವೆ. ಐತಿಹಾಸಿಕ ತಾಣಗಳು ಪ್ರವಾಸೋದ್ಯಮದ ಪ್ರಮುಖ ತಾಣಗಳೂ ಹೌದು. ಸ್ಥಳೀಯ ಸಮುದಾಯಗಳಿಗೆ ಆದಾಯ ಮತ್ತು ಉದ್ಯೋಗಗಳನ್ನು ಸೃಷ್ಟಿಸುವುದರ ಮೂಲಕ ಒಂದು ಪ್ರದೇಶದ ಆರ್ಥಿಕ ಅಭಿವೃದ್ಧಿಯನ್ನೂ ಹೆಚ್ಚಿಸುತ್ತದೆ. ಅನೇಕ ಐತಿಹಾಸಿಕ ಸ್ಮಾರಕಗಳು ಪ್ರಮುಖ ಘಟನೆಗಳು, ವ್ಯಕ್ತಿಗಳು ಅಥವಾ ಆದರ್ಶಗಳನ್ನು ಪ್ರತಿನಿಧಿಸುವ ಸಾಂಕೇತಗಳು. ಅವುಗಳನ್ನು ಸಂರಕ್ಷಿಸುವುದು ರಾಷ್ಟ್ರೀಯ ಅಥವಾ ಸಮುದಾಯದ ಹೆಮ್ಮೆಯ ಪ್ರಜ್ಞೆಯನ್ನು ಬಲಪಡಿಸುತ್ತದೆ ಮತ್ತು ಸಾಮಾಜಿಕ ನಿರಂತರತೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ರಾಷ್ಟ್ರೀಯ ಸಂಪತ್ತುಗಳಾದ ಐತಿಹಾಸಿಕ ಸ್ಮಾರಕಗಳು ಸಾಮಾನ್ಯವಾಗಿ ಗಮನಾರ್ಹವಾದ ಕಲೆಗಾರಿಕೆ, ವಿನ್ಯಾಸ ಮತ್ತು ಕಲಾತ್ಮಕ ಅಭಿವ್ಯಕ್ತಿಗಳನ್ನು ಪ್ರದರ್ಶಿಸುತ್ತವೆ. ಅವುಗಳನ್ನು ರಕ್ಷಿಸುವುದು ಹಿಂದಿನಿಂದಲೂ ವಾಸ್ತುಶಿಲ್ಪದ ಶೈಲಿಗಳು ಮತ್ತು ಕಲಾತ್ಮಕ ಸಂಪ್ರದಾಯಗಳ ಅಮೂಲ್ಯ ಉದಾಹರಣೆಗಳನ್ನು ಸಂರಕ್ಷಿಸುತ್ತದೆ. 'ಅಂತಿಮವಾಗಿ, ಐತಿಹಾಸಿಕ ಸ್ಮಾರಕಗಳನ್ನು ಸಂರಕ್ಷಿಸುವುದು ಹಿಂದಿನಿಂದ ಕಲಿಯಲು, ಸಾಂಸ್ಕೃತಿಕ ತಿಳುವಳಿಕೆಯನ್ನು ಬೆಳೆಸಲು ಮತ್ತು ಭವಿಷ್ಯದ ಪೀಳಿಗೆಗೆ ನಮ್ಮ ಹಂಚಿಕೆಯ ಪರಂಪರೆಯನ್ನು ರವಾನಿಸಲು ಸಹಾಯ ಮಾಡುತ್ತದೆ. ಇದು ಜವಾಬ್ದಾರಿಯುತ ಉಸ್ತುವಾರಿ ಮತ್ತು ಸುಸ್ಥಿರ ಅಭಿವೃದ್ಧಿಯ ನಿರ್ಣಾಯಕ ಅಂಶವಾಗಿದೆ.

## ವೈದ್ಯಪದ್ಮರು

**ಸಂಪಾದಕರು:** ಡಾ. ನಾ. ಸೋಮೇಶ್ವರ
**ಪ್ರಕಾಶಕರು:** ಕನ್ನಡ ವೈದ್ಯ ಬರಹಗಾರರ ಸಮಿತಿ
**ಬೆಲೆ:** ರೂ. 200





'ವೈದ್ಯ ಪದ್ಮರು' ಕೃತಿಯ ಉಪಶೀರ್ಷಿಕೆಯಲ್ಲಿ ಹೇಳಿರುವಂತೆ ಇದು ಆಧುನಿಕ ವೈದ್ಯ ಪದ್ಧತಿಯ ಪದ್ಮ ಪುರಸ್ಕೃತ ಕರುನಾಡ ವೈದ್ಯರ ಕುರಿತು ತಿಳಿಸಿಕೊಡುವ ಪುಸ್ತಕ. ಸಮಾಜಕ್ಕೆ ಗಣನೀಯ ಸೇವೆಯನ್ನು ಸಲ್ಲಿಸಿದ, ಎಲೆ ಮರೆಯ ಹಾಗೆ ತಮ್ಮ ಪಾಡಿಗೆ ತಮ್ಮ ಕರ್ತವ್ಯವನ್ನು ನಿಭಾಯಿಸಿ, ಮಹತ್ತರದ ಕಾರ್ಯಗಳಿಗೆ ಕಾರಣೀಭೂತರಾಗಿರುವ ಅನೇಕ ವೈದರು ಆಗಿ ಹೋಗಿದ್ದಾರೆ. ಇಂದಿಗೂ ಅನೇಕರು ಶ್ರದ್ಧೆಯಿಂದ ಅನವರತ ಶ್ರಮಿಸುತ್ತಿದ್ದಾರೆ. ಅಂತಹ ವೈದ್ಯರ ಹೆಸರು ಜನಜನಿತವಾಗದಿದ್ದರೂ ಅವರ ಸೇವೆಯ ಕಾರಣಕ್ಕಾಗಿ ಇಂದು ವೈದ್ಯಲೋಕದಲ್ಲಿ ಮನ್ನಣೆಯನ್ನು ಗಳಿಸಿರುವ ಪ್ರಖ್ಯಾತ ಸಂಸ್ಥೆಗಳು ಗಗನದೆತ್ತರಕ್ಕೆ ಬೆಳೆದು ನಿಂತಿದೆ. ಆದರೆ ಅದರ ಹಿಂದಿನ ಶ್ರಮದ ಕಥೆ ಹೇಳಹೆಸರಿಲ್ಲದಂತಾಗಿದೆ. ಈ ನಾಡಿಗಾಗಿ ತಮ್ಮ ಸರ್ವಸ್ವವನ್ನೂ ಮುಡಿಪಾಗಿಟ್ಟ 16 ಮಂದಿ ವೈದ್ಯರ ಪರಿಚಯವನ್ನು ಇಂದಿನ ಪೀಳಿಗೆಯ ಮುಂದಿರಿಸುವ ಪ್ರಾಮಾಣಿಕ ಪ್ರಯತ್ನವನ್ನು ಈ ಕೃತಿ ಮಾಡಿಕೊಡುತ್ತದೆ.

'ನಮ್ಮ ಶ್ರೀಮಂತ ಪರಂಪರೆಯನ್ನು ನಾವು ವ್ಯವಸ್ಥಿತವಾಗಿ ದಾಖಲಿಸದಿದ್ದರೆ ಅದು ನಮ್ಮ ತಪ್ಪಾಗುತ್ತದೆಯೇ ವಿನಃ ಮುಂದಿನ ತಲೆಮಾರಿನ ತಪ್ಪಾಗುವುದಿಲ್ಲ.' ಎಂದು ಪುಸ್ತಕದ ಮುನ್ನುಡಿಯಲ್ಲಿ ಸ್ಪಷ್ಟಪಡಿಸಿರುವಂತೆ ಈ ಅವಿನಾಶಿ ಪರಂಪರೆಯನ್ನು ತಮ್ಮ ಅದಮ್ಯ ಸೇವೆಯ ಮೂಲಕ ಶ್ರೀಮಂತಗೊಳಿಸಿದ, ಈ ನಾಡಿನ ಹೆಸರನ್ನು ಜಾಗತಿಕ ಮಟ್ಟದಲ್ಲಿ ಪಸರಿಸಿದ ವೈದರ ಕುರಿತು ಪ್ರೇರಣಾದಾಯಿಯಾಗಿ ದಾಖಲಿಸುವಲ್ಲಿ ಈ ಪುಸ್ತಕ ಯಶಸ್ವಿಯಾಗಿದೆ. ತಮ್ಮ ಗಣನೀಯ ಸೇವೆಗಾಗಿ ಕೇಂದ್ರ ಸರ್ಕಾರದ ಪದ್ಮಪುರಸ್ಕಾರಗಳಿಗೆ ಭಾಜನರಾದ, ಪುರಸ್ಕಾರ ನೀಡುವಾಗ 'ಕರ್ನಾಟಕದವರು' ಎಂದು ಘೋಷಿಸಲ್ಪಟ್ಟ, ಆಧುನಿಕ ವೈದ್ಯಕೀಯ ಕ್ಷೇತ್ರದ ಸೇವೆಗಾಗಿಯೇ ಪ್ರಶಸ್ತಿಯನ್ನು ಪಡೆದಿರುವ ವೈದ್ಯರ ಕುರಿತಾಗಿಯೇ ಯುವಪೀಳಿಗೆಗೆ ತಿಳಿಸಿಕೊಡಬೇಕು ಮತ್ತು ಆ ಮಹಾನ್ ವೈದ್ಯರ ಕುರಿತು ದಾಖಲಿಸಬೇಕು ಎಂದು ಪುಸ್ತಕ ರಚಿಸುವಾಗಲೇ ಇಟ್ಟುಕೊಂಡ ಮಾನದಂಡಗಳಾಧಾರಿತವಾಗಿ ಈ ಕೃತಿ ಮೂಡಿಬಂದಿದೆ.

**ಸಂಪಾದಕೀಯ ಸಹಕಾರ:** ಸುಲಕ್ಷಣಾ ಶರ್ಮಾ, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಗಿರಿಧರ್ ಉದ್ಯಾವರ, ದೀಕ್ಷಿತ್ ನಾಯರ್ ಮಂಡ್ಯ

## ಬೆಂಗಳೂರು ಐಐಎಸ್‌ಸಿಯ ಗೋವಿಂದರಾಜನ್‌ಗೆ ಚೊಚ್ಚಲ 'ವಿಜ್ಞಾನರತ್ನ' ಪ್ರಶಸ್ತಿ



ಕೇಂದ್ರ ಸರ್ಕಾರದ ವತಿಯಿಂದ ಇದೇ ಮೊದಲ ಬಾರಿಗೆ ನೀಡಲಾದ 'ವಿಜ್ಞಾನರತ್ನ' ಪ್ರಶಸ್ತಿಗೆ ಖ್ಯಾತ ಜೀವರಸಾಯನ ಶಾಸ್ತ್ರಜ್ಞ, ಪದ್ಮವಿಭೂಷಣ ಪುರಸ್ಕೃತ ಬೆಂಗಳೂರು ಐಐಎಸ್‌ಸಿ (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್) ಯ ಗೋವಿಂದರಾಜನ್ ಪದ್ಮನಾಭನ್ ಭಾಜನರಾಗಿದ್ದಾರೆ. ಜೊತೆಗೆ ಚಂದ್ರಯಾನ–3ರ ಯಶಸ್ಸಿಗೆ ಶ್ರಮಿಸಿದ ವಿಜ್ಞಾನಿಗಳು ಮತ್ತು ಅದರ ತಂಡಕ್ಕೆ ಅತ್ಯುತ್ತಮ ವಿಜ್ಞಾನ ತಂಡ ಪುರಸ್ಕಾರ ಪ್ರಕಟಿಸಲಾಗಿದೆ.

## ರಾಷ್ಟ್ರಪತಿ ದ್ರೌಪದಿ ಮುರ್ಮುಗೆ ರಾಮೋಸ್–ಹೋರ್ಟಾದ ಅತ್ಯುನ್ನತ ನಾಗರಿಕ ಪುರಸ್ಕಾರ



ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಮೋಸ್ – ಹೋರ್ಟಾದ ಅತ್ಯುನ್ನತ ನಾಗರಿಕ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅವರ ಸಾರ್ವಜನಿಕ ಸೇವೆಯಲ್ಲಿನ ಸಾಧನೆ ಮತ್ತು ಶಿಕ್ಷಣ, ಸಮಾಜ ಕಲ್ಯಾಣ ಮತ್ತು ಮಹಿಳಾ ಸಬಲೀಕರಣದಲ್ಲಿನ ಅವರ ಕೊಡುಗೆಯನ್ನು ಗುರುತಿಸಿ ರಾಮೋಸ್–ಹೋರ್ಟಾದ ಅಧ್ಯಕ್ಷ ಜೋಸ್ ರಾಮೋಸ್–ಹೋರ್ಟಾ ಅವರು ತಮ್ಮ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಆರ್ಡರ್ ಆಫ್ ಟಿಮೋರ್–ಲೆಸ್ಟೆ ಗ್ರ್ಯಾಂಡ್–ಕಾಲರ್ ಅನ್ನು ಮುರ್ಮು ಅವರಿಗೆ ಪ್ರದಾನ ಮಾಡಿದರು.

## ಪಿಎಂ ಕೌಶಲ್ ವಿಕಾಸ್ ಯೋಜನೆಯಡಿ 1.48 ಕೋಟಿ ಅಭ್ಯರ್ಥಿಗಳಿಗೆ ತರಬೇತಿ

ಪ್ರಧಾನಮಂತ್ರಿ ಕೌಶಲ್ ವಿಕಾಸ್ ಯೋಜನೆಯಡಿ ಇಲ್ಲಿಯವರೆಗೆ 1 ಕೋಟಿ 48 ಲಕ್ಷ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ ಎಂದು ಕೇಂದ್ರ ಸರ್ಕಾರ ಮಾಹಿತಿ ನೀಡಿದೆ. ದೇಶಾದ್ಯಂತ ಯುವಕರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲು 2015ರಲ್ಲಿ ಯೋಜನೆಯನ್ನು ಪ್ರಾರಂಭಿಸಲಾಗಿತ್ತು. ಈ ಕೌಶಲ್ಯ ಯೋಜನೆಯ ಉದ್ದೇಶವು ಭಾರತದ ಯುವಜನತೆಗೆ, ಉದ್ಯೋಗಕ್ಕೆ ಸೂಕ್ತವಾದ ಕೌಶಲ್ಯ ತರಬೇತಿ ನೀಡಿ, ಅವರು ಉತ್ತಮ ಜೀವನೋಪಾಯ ಗಳಿಸುವಲ್ಲಿ ಬೆಂಬಲಿಸುವುದಾಗಿದೆ.

# ಸಾಲುದ್ದದ ಸುದ್ದಿಗಳು

## ಪಾಕ್‌ನ 188 ಹಿಂದೂ ಪ್ರಜೆಗಳಿಗೆ ಸಿಎಎ ಅಡಿಯಲ್ಲಿ ಪೌರತ್ವ



ಕೇಂದ್ರ ಗೃಹ ಸಚಿವ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರು ಗುಜರಾತ್‌ನ ಅಹಮದಾಬಾದ್‌ನಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಅಡಿಯಲ್ಲಿ 188 ಪಾಕಿಸ್ಥಾನಿ ಪ್ರಜೆಗಳಿಗೆ ಪೌರತ್ವ ಪ್ರಮಾಣಪತ್ರಗಳನ್ನು ವಿತರಿಸಿದರು. ಸಿಎಎ ಧಾರ್ಮಿಕ ಶೋಷಣೆಗೆ ಒಳಗಾಗಿ ನಿರಾಶ್ರಿತರಾದವರಿಗೆ ನ್ಯಾಯ ಮತ್ತು ಹಕ್ಕುಗಳನ್ನು ನೀಡುವ ಕಾನೂನು ಎಂದು ತಿಳಿಸಿದರು.

## 5 ವರ್ಷದಲ್ಲಿ 11.8 ಕೋಟಿ ಗ್ರಾಮೀಣ ಕುಟುಂಬಗಳಿಗೆ ಕುಡಿಯುವ ನೀರಿನ ಸಂಪರ್ಕ

ಜಲ ಜೀವನ್ ಮಿಷನ್ – ಹರ್ ಘರ್ ಜಲ್ ಯೋಜನೆಯು ಆಗಸ್ಟ್ 2019ರಲ್ಲಿ ಪ್ರಾರಂಭವಾಗಿ, ಐದು ವರ್ಷಗಳಲ್ಲಿ 11.8 ಕೋಟಿ ಗ್ರಾಮೀಣ ಕುಟುಂಬಗಳಿಗೆ ಪೈಪ್‌ಲೈನ್ ನೀರಿನ ಸಂಪರ್ಕವನ್ನು ಒದಗಿಸಿದೆ. ಯೋಜನೆಯನ್ನು ಪ್ರಾರಂಭಿಸಿದಾಗ, ಕೇವಲ 3.23 ಕೋಟಿ (ಶೇ. 16.8) ಗ್ರಾಮೀಣ ಕುಟುಂಬಗಳು ನಲ್ಲಿ ನೀರಿನ ಸಂಪರ್ಕಗಳನ್ನು ಹೊಂದಿದ್ದವು. ಈ ಸಂಖ್ಯೆ ಈಗ 15.03 ಕೋಟಿ ಅಂದರೆ 77.83 ಪ್ರತಿಶತ ಕುಟುಂಬಗಳಿಗೆ ತಲುಪಿದೆ. ಹಿಮಾಚಲ ಪ್ರದೇಶ, ಹರಿಯಾಣ, ಗುಜರಾತ್, ಗೋವಾ, ತೆಲಂಗಾಣ, ಅರುಣಾಚಲ ಪ್ರದೇಶ ಮತ್ತು ಮಿಜೋರಾಂನಂತಹ ರಾಜ್ಯಗಳು 100 ಪ್ರತಿಶತದಷ್ಟು ವ್ಯಾಪ್ತಿಯೊಂದಿಗೆ 'ಹರ್ ಘರ್ ಜಲ್' ಅನುಷ್ಠಾನಗೊಳಿಸಿದ ರಾಜ್ಯಗಳ ಪಟ್ಟಿಯಲ್ಲಿ ಅಗ್ರ ಸ್ಥಾನ ಪಡೆದಿವೆ. 2.31 ಲಕ್ಷ ಗ್ರಾಮಗಳು ಶೇ 100 ರಷ್ಟು ನಲ್ಲಿ ನೀರಿನ ಸಂಪರ್ಕವನ್ನು ಹೊಂದಿವೆ. ಅವುಗಳಲ್ಲಿ ಸುಮಾರು 1.28 ಲಕ್ಷ ಗ್ರಾಮಗಳು ಆಯಾ ಗ್ರಾಮ ಸಭೆಯಿಂದ ಪ್ರಮಾಣೀಕರಿಸಲ್ಪಟ್ಟಿವೆ.

## ಅಮೆಜಾನ್ ಕಾಡುಗಳಲ್ಲಿ ಕಾಡ್ಗಿಚ್ಚು 20 ಪಟ್ಟು ಹೆಚ್ಚಳ!



ಮಾನವ ನಿರ್ಮಿತ ಕಾರಣಗಳಿಂದ ಉಂಟಾಗಿರುವ ಜಾಗತಿಕ ಹವಾಮಾನ ಬದಲಾವಣೆಯು ಅಮೆಜಾನ್ ಕಾಡುಗಳಲ್ಲಿ ಬರೋಬ್ಬರಿ 20 ಪಟ್ಟು ಹೆಚ್ಚು ಕಾಡ್ಗಿಚ್ಚುಗಳು ಉಂಟಾಗಲು ಕಾರಣವಾಗಿದೆ ಎಂದು ಅಧ್ಯಯನ ವರದಿ ತಿಳಿಸಿದೆ. ಈ ಅಧ್ಯಯನ ವರದಿಯಿಂದ 2023ರ ಮಾರ್ಚ್‌ನಿಂದ 2024ರ ಫೆಬ್ರುವರಿವರೆಗೆ ಅಮೆಜಾನ್, ಕೆನಡಾ, ಗ್ರೀಸ್, ಹವಾಯಿ, ಚೀಲಿ ಕಾಡುಗಳಲ್ಲಿ ಉಂಟಾದ ಭೀಕರ ಕಾಡ್ಗಿಚ್ಚುಗಳನ್ನು ವಿವರವಾಗಿ ಅಧ್ಯಯನ ಮಾಡಿ ಹಲವಾರು ಆತಂಕಕಾರಿ ಸಂಗತಿಗಳನ್ನು ಕಂಡುಕೊಳ್ಳಲಾಗಿದೆ. ಹವಾಮಾನ ಬದಲಾವಣೆಯಿಂದ ಕೆನಡಾ ಹಾಗೂ ಗ್ರೀಸ್‌ನಲ್ಲಿ ಒಂದು ವರ್ಷದಲ್ಲಿ ಮೂರು ಬಾರಿ ಕಾಡ್ಗಿಚ್ಚುಗಳು ಸಂಭವಿಸಿವೆ. ಇದು ಹಿಂದಿನ ಕಾಡ್ಗಿಚ್ಚುಗಳಿಗೆ ಹೋಲಿಸಿದರೆ ಎರಡು ಪಟ್ಟು ಹೆಚ್ಚು ಎಂದು ಹೇಳಿದೆ. ಪ್ರಪಂಚದಾದ್ಯಂತ ಸಂಭವಿಸುತ್ತಿರುವ ಕಾಡ್ಗಿಚ್ಚುಗಳಿಂದ ಭೂಮಿಯ ಮೇಲೆ ಇಂಗಾಲದ ಹೊರಸೂಸುವಿಕೆಯೂ ಸರಾಸರಿಗಿಂತ ಶೇ.16 ರಷ್ಟು ಹೆಚ್ಚಾಗಿದೆ ಎಂದು ಬ್ರಿಟನ್ ಮತ್ತು ಬ್ರೆಜಿಲ್‌ನ ಸಂಶೋಧಕರನ್ನು ಒಳಗೊಂಡಿರುವ ಅಧ್ಯಯನ ತಂಡ ತಿಳಿಸಿದೆ. ಅಮೆಜಾನ್ ವಲಯದಲ್ಲಿ ಗಾಳಿಯ ಗುಣಮಟ್ಟ ತುಂಬಾ ಕೆಟ್ಟದಾಗುತ್ತಿದ್ದು, ಅಮೆಜಾನ್ ಹಾಗೂ ಕೆನಡಾ ಕಾಡುಗಳಲ್ಲಿ ಉಂಟಾಗುತ್ತಿರುವ ಕಾಡ್ಗಿಚ್ಚುಗಳಿಂದ ಭೂಮಿಯ ಹವಾಮಾನದ ಮೇಲೆ ಶಾಶ್ವತವಾದ ಪರಿಣಾಮ ಉಂಟಾಗುತ್ತಿದೆ. ತಾಪಮಾನದ ಹೆಚ್ಚಳದಿಂದ ಕಾಡ್ಗಿಚ್ಚುಗಳು ಸಂಭವಿಸುವುದು ಸಹ ಹೆಚ್ಚಳವಾಗುತ್ತಿದೆ. ಇದು ಪರಿಸರ ಹಾಗೂ ಸಮಾಜದ ಮೇಲೆ ವ್ಯತಿರಿಕ್ತ ಪರಿಣಾಮವನ್ನುಂಟುಮಾಡುತ್ತಿದೆ. ಅಮೆಜಾನ್ ವಲಯದಲ್ಲಿನ ಕೃಷಿ ಚಟುವಟಿಕೆಗಳ ವಿಸ್ತರಣೆಯೂ ಸಹ ಕಾಡ್ಗಿಚ್ಚುಗಳ ಹೆಚ್ಚಳಕ್ಕೆ ಕಾರಣವಾಗುತ್ತಿದೆ ಎಂದು ವರದಿ ಹೇಳಿದೆ.

# ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದು ಮಿಂಚಿದ 21ರ ಹರೆಯದ ಪರಿಶ್ರಮಿ ಅಮನ್ ಸೆಹ್ರಾವತ್

ಪ್ರೇರಣಾ

ಸಾಧನೆ ಸೋಮಾರಿಯ ಸ್ವತ್ತಲ್ಲ. ಶ್ರದ್ಧೆ, ಪ್ರಾಮಾಣಿಕತೆ ಮತ್ತು ಪರಿಶ್ರಮದಿಂದ ಏನನ್ನು ಬೇಕಾದರೂ ಸಾಧಿಸಬಹುದು ಎನ್ನುವುದನ್ನು ತಿಳಿಸಿದ ಸಹಸ್ರಾರು ನಿದರ್ಶನಗಳು ನಮ್ಮ ಕಣ್ಣಮುಂದಿದೆ. ಈ ಪಟ್ಟಿಗೆ ಇತ್ತೀಚೆಗೆ ಸೇರ್ಪಡೆಗೊಂಡ ಹೆಸರು 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕುಸ್ತಿಯಲ್ಲಿ ಕಂಚಿನ ಪದಕ ಗೆದ್ದ ಭಾರತದ ಅಮನ್ ಸೆಹ್ರಾವತ್.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ 57 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಭಾರತೀಯ ಕುಸ್ತಿಪಟು ಅಮನ್ ಸೆಹ್ರಾವತ್ ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಪೋರ್ಟೊ ರಿಕೊದ ಕುಸ್ತಿಪಟು ಡೇರಿಯನ್ ಕ್ರೂಜ್ ಅವರನ್ನು 13–5 ರಿಂದ ಸೋಲಿಸಿ ಕಂಚಿನ ಪದಕಕ್ಕೆ ಕೊರಳೊಡ್ಡಿದರು. ಆದರೆ ವಿಶ್ವ ವೇದಿಕೆಯಲ್ಲಿ ಪದಕಕ್ಕೆ ಮುತ್ತಿಟ್ಟು ರಾಷ್ಟ್ರಕ್ಕೆ ಗರಿಮೆಯನ್ನು ತರುವಂತಹ ಪ್ರದರ್ಶನ ನೀಡಿದ ಅಮನ್ ಈ ಸಾಧನೆಗೂ ಪೂರ್ವದಲ್ಲಿ ಎದುರಿಸಿದ್ದು ಸಂಕಷ್ಟಗಳ ಸರಮಾಲೆಯನ್ನು! ಅವರ ಸ್ಫೂರ್ತಿದಾಯಕ ಜೀವನಗಾಥೆ ಪ್ರಸ್ತುತ ಅನೇಕರಿಗೆ ಪ್ರೇರಣೆಯಾಗಿದೆ.

ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಏಳನೇ ಭಾರತೀಯ ಕುಸ್ತಿಪಟು ಎನಿಸಿಕೊಂಡ ಅಮನ್, ತನ್ನ 21ನೇ ವಯಸ್ಸಿನಲ್ಲಿ ಏಷ್ಯನ್ ಗೇಮ್ಸ್‌ನಲ್ಲೂ ಪದಕಗಳನ್ನು ಗೆದ್ದಿದ್ದಾರೆ. ಇದಲ್ಲದೆ, ಅಮನ್ ಸೆಹ್ರಾವತ್ ವೈಯಕ್ತಿಕ ಕ್ರೀಡೆಗಳಲ್ಲಿ ಒಲಿಂಪಿಕ್ ಪದಕ ಗೆದ್ದ ಅತ್ಯಂತ ಕಿರಿಯ ಭಾರತೀಯ ವ್ಯಕ್ತಿ ಎಂಬ ಅಭಿದಾನಕ್ಕೂ ಪಾತ್ರರಾಗಿದ್ದಾರೆ.

ಕುಸ್ತಿ ಆಟವಲ್ಲ, ಇದು ನನ್ನ ಜೀವನ ಎಂದೇನಾದರೂ ಅವರು ಹೇಳಿದರೆ ಅದು ಉತ್ಪ್ರೇಕ್ಷೆಯಂತೂ ಅಲ್ಲ. ಏಕೆಂದರೆ ಕ್ರೀಡೆಯಲ್ಲೂ, ಜೀವನದಲ್ಲೂ ಎದುರಾದ ಬೆಟ್ಟದಂತಹ ಸವಾಲುಗಳನ್ನು ಎದುರಿಸಿ, ವಿಜಯ ಸಾಧಿಸಿದ ಯುವಕ ಅಮನ್ ಸೆಹ್ರಾವತ್.

ಅಮನ್ ಹರಿಯಾಣದ ಜಜ್ಜರ್ ಜಿಲ್ಲೆಯ ಬಿರೋಹರ್ ಗ್ರಾಮದಲ್ಲಿ ಜನಿಸಿದರು. ಕೇವಲ 11 ವರ್ಷದವನಿದ್ದಾಗ ತಾಯಿಯನ್ನು ಕಳೆದುಕೊಂಡರು. ತನ್ನ ಮಗ ಕುಸ್ತಿಪಟುವಾಗಿ ಬೆಳೆಯಬೇಕು ಎಂದು ಕನಸು ಕಾಣುತ್ತಿದ್ದ ತಂದೆ, ತಾಯಿಯ ಸಾವಿನ ನೋವನ್ನು ಮಗನಿಂದ ದೂರ ಮಾಡಲು ದೆಹಲಿಯ ಛತ್ರಸಾಲ್ ಸ್ಟೇಡಿಯಂನಲ್ಲಿರುವ ಕುಸ್ತಿ ಅಕಾಡೆಮಿಗೆ ಸೇರಿಸಿದರು. ಕೆಲವು ತಿಂಗಳ ನಂತರ ತಂದೆಯೂ ತೀರಿಕೊಂಡರು. ಅದಾದ ನಂತರ ತನ್ನ ತಂದೆಯ ಕನಸನ್ನು ಈಡೇರಿಸುವತ್ತ ಗಮನ ಹರಿಸಿದ ಅಮನ್, ತನ್ನ ಅರ್ಧ ಜೀವನವನ್ನು ಕುಸ್ತಿ ಮೈದಾನದಲ್ಲಿ ಕಳೆದರು.

> 'ನನ್ನ ಪೋಷಕರು ಯಾವಾಗಲೂ ನಾನು ಕುಸ್ತಿಪಟು ಆಗಬೇಕೆಂದು ಬಯಸಿದ್ದರು, ಅವರಿಗೆ ಒಲಿಂಪಿಕ್ಸ್ ಬಗ್ಗೆ ಏನೂ ತಿಳಿದಿರಲಿಲ್ಲ, ಆದರೆ ನಾನು ಕುಸ್ತಿಪಟು ಆಗಬೇಕೆಂದು ಅವರು ಬಯಸಿದ್ದರು. ನನ್ನ ಹೆತ್ತವರಿಗೆ ಮತ್ತು ದೇಶಕ್ಕೆ ಈ ಪದಕವನ್ನು ಅರ್ಪಿಸುತ್ತೇನೆ'
>
> – ಅಮನ್ ಸೆಹ್ರಾವತ್




ಅಮನ್ ಛತ್ರಸಾಲ್ ಸ್ಟೇಡಿಯಂನಲ್ಲೇ ತಂಗಲು ಬಯಸಿದ್ದರು. ಅಲ್ಲಿ ಕೋಚ್ ಲಲಿತ್ ಅವರ ಕೊಠಡಿ ಇತ್ತು. ಏಷ್ಯನ್ ಗೇಮ್ಸ್‌ನಲ್ಲಿ ಕಂಚಿನ ಪದಕ ಗೆದ್ದ ನಂತರ, ಅಮನ್‌ಗೆ ಅಡುಗೆ ಕೋಣೆಯ ಜೊತೆಗೆ ಒಂದು ವಿಶೇಷ ಕೋಣೆಯ ವ್ಯವಸ್ಥೆಯನ್ನು ನೀಡಲಾಯಿತು. ಆ ರೂಮಿನ ಗೋಡೆಯ ಮೇಲೆ 'ಒಲಿಂಪಿಕ್ ಪದಕ ಗೆಲ್ಲುವುದು ಅಷ್ಟು ಸುಲಭವಾಗಿದ್ದರೆ ಎಲ್ಲರೂ ಗೆಲ್ಲುತ್ತಿದ್ದರು' ಎಂಬ ಸಾಲುಗಳನ್ನು ಅಮನ್ ಬರೆದಿದ್ದಾರೆ. ಪ್ರತೀ ದಿನ ಆ ಸಾಲನ್ನು ನೋಡುತ್ತಿದ್ದ ಅಮನ್, ಉತ್ತಮ ಪ್ರದರ್ಶನ ನೀಡಲು ಹೆಚ್ಚು ಶ್ರಮವಹಿಸುತ್ತಿದ್ದರು.

ನಿರಂತರ ಪ್ರಯತ್ನದ ಫಲವಾಗಿ 2022ರಲ್ಲಿ, ಅವರು 23 ವರ್ಷದೊಳಗಿನ ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನ ಮತ್ತು 23 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಮತ್ತೊಂದು ಚಿನ್ನದ ಪದಕವನ್ನು ಗೆದ್ದರು. ಇದಲ್ಲದೆ, ವಿವಿಧ ಗ್ರ್ಯಾಂಡ್ ಪ್ರಿಕ್ಸ್ ಈವೆಂಟ್‌ಗಳಲ್ಲಿ 2 ಚಿನ್ನ, 2 ಬೆಳ್ಳಿ ಮತ್ತು ಒಂದು ಕಂಚಿನ ಪದಕಗಳನ್ನು ಗೆದ್ದಿದ್ದಾರೆ. 2023ರ ಏಷ್ಯನ್ ಗೇಮ್ಸ್‌ನಲ್ಲಿ ಕಂಚಿನ ಪದಕ ಗೆದ್ದ ನಂತರ ಅವರು ಹೆಚ್ಚು ಖ್ಯಾತಿ ಪಡೆದರು.

ಅಮನ್‌ಗೆ ಕುಸ್ತಿಪಟು ಸುಶೀಲ್ ಕುಮಾರ್ ಎಂದರೆ ತುಂಬಾ ಇಷ್ಟ. ಸುಶೀಲ್ ಕುಮಾರ್ ಭಾರತಕ್ಕೆ 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಮತ್ತು 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ತಂದುಕೊಟ್ಟ ಕ್ರೀಡಾಪಟು. ಜತೆಗೆ ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದ ರವಿಕುಮಾರ್ ದಹಿಯಾ ಕೂಡ ಅಮನ್‌ಗೆ ಮಾದರಿಯಾಗಿದ್ದಾರೆ. ವಿಶೇಷವೆಂದರೆ ಅಮನ್, ಒಲಿಂಪಿಕ್ಸ್ ಅರ್ಹತಾ ಕುಸ್ತಿ ಪಂದ್ಯದಲ್ಲಿ ರವಿಕುಮಾರ್ ಅವರ ವಿರುದ್ಧ 14–13 ಅಂಕಗಳಿಂದ ಗೆದ್ದು ಪ್ಯಾರಿಸ್ ಒಲಿಂಪಿಕ್ಸ್‌ಗೆ ಹೋಗುವ ಅವಕಾಶ ಪಡೆದರು. ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಪಡೆದು ದೇಶಕ್ಕೆ ಕೀರ್ತಿ ತಂದರು.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th AUGUST 2024

REGISTERED NEWS PAPER RNI 36528/79 LICENSE TO POST
WITHOUT PREPAYMENT LICENSE NO PMG/BG/WPP-46/2024-2026 AT BENGALURU PSO
BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 01-09-2024



ರಾಷ್ಟ್ರೋತ್ಥಾನ ಪರಿಷತ್‌ನ

TAPAS reach the unreached
saadhana reach the unreached

# ತಪಸ್–ಸಾಧನಾಗೆ ಅರ್ಜಿ ಆಹ್ವಾನ

### ಇಂಜಿನಿಯರ್ ಮತ್ತು ವೈದ್ಯರಾಗಬೇಕೆಂಬ ಕನಸುಕಾಣುತ್ತಿರುವ ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸದಾವಕಾಶ

ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಶಿಕ್ಷಣ ಪಡೆಯಬೇಕೆಂಬ ಕನಸು ಕಾಣುತ್ತಿರುವ ಗ್ರಾಮೀಣ ಭಾಗದ ಪ್ರತಿಭಾವಂತ ವಿದ್ಯಾರ್ಥಿಗಳ ಆಶಾಕಿರಣವಾಗಿ ರಾಷ್ಟ್ರೋತ್ಥಾನ ಪರಿಷತ್‌ನ ತಪಸ್ ಮತ್ತು ಸಾಧನಾ ಪ್ರಕಲ್ಪಗಳು ಕಾರ್ಯನಿರ್ವಹಿಸುತ್ತಿವೆ. ತಪಸ್ ಹಾಗೂ ಸಾಧನಾ, ರಾಷ್ಟ್ರೋತ್ಥಾನ ಟ್ರಸ್ಟ್‌ನ ಮಹತ್ವಾಕಾಂಕ್ಷಿ ಯೋಜನೆಗಳಾಗಿದ್ದು, ಆರ್ಥಿಕವಾಗಿ ಸಬಲರಲ್ಲದ ವಿದ್ಯಾರ್ಥಿಗಳಿಗೆ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಶಿಕ್ಷಣಕ್ಕೆ ಪ್ರವೇಶ ಪಡೆಯುವ ಸಲುವಾಗಿ ತರಬೇತಿಯನ್ನು ನೀಡುತ್ತಿದೆ. ಹಾಗೆಯೇ ಕರ್ನಾಟಕ ಗ್ರಾಮಾಂತರ ಪ್ರದೇಶದ ಪ್ರತಿಭಾವಂತ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಸಹಕಾರಿ ಆಗುವಂತೆ ಉಚಿತ ಊಟ ಮತ್ತು ವಸತಿಯ ವ್ಯವಸ್ಥೆಯ ಜೊತೆಗೆ ಮಕ್ಕಳಲ್ಲಿ ಭಾರತೀಯ ಸಂಸ್ಕಾರಗಳನ್ನು ಬೆಳೆಸುವ ಕಾಳಜಿಯನ್ನೂ ಇಟ್ಟುಕೊಂಡಿದೆ. ಇದೀಗ ಈ ತರಬೇತಿಗಳಿಗೆ ವಿದ್ಯಾರ್ಥಿಗಳ ಆಯ್ಕೆಗಾಗಿ ಪ್ರಸಕ್ತ ಸಾಲಿನ ಅರ್ಹತಾ ಪರೀಕ್ಷೆಗೆ ಅರ್ಜಿಯನ್ನು ಆಹ್ವಾನಿಸಿದೆ.

**ಅರ್ಜಿ ಸಲ್ಲಿಸಲು ಅರ್ಹತೆಗಳು:** ತಪಸ್‌ಗೆ ಗಂಡು ಮಕ್ಕಳು ಹಾಗೂ ಸಾಧನಾಗೆ ಹೆಣ್ಣು ಮಕ್ಕಳು ಅರ್ಜಿ ಸಲ್ಲಿಸಬಹುದು. ಅವರು ಪ್ರಸ್ತುತ ಸಾಲಿನಲ್ಲಿ ಎಸ್.ಎಸ್.ಎಲ್.ಸಿ./ 10ನೇ ತರಗತಿಯ ಪರೀಕ್ಷೆಯನ್ನು ಬರೆಯುವವರಾಗಿರಬೇಕು. 9ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಕನಿಷ್ಠ 85% ಅಂಕಗಳನ್ನು ಪಡೆದಿರಬೇಕು. ಪೋಷಕರ ವಾರ್ಷಿಕ ವರಮಾನ ರೂ. 2 ಲಕ್ಷ ಮೀರಿರಬಾರದು.

**ಅರ್ಜಿ ಸಲ್ಲಿಕೆ:** tapassaadhana.rashtrotthana.org ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸುವಾಗ ವಿದ್ಯಾರ್ಥಿಯ 9ನೇ ತರಗತಿಯ ಅಂಕಪಟ್ಟಿ ಹಾಗೂ ಫೋಟೋವನ್ನು ಸ್ಕ್ಯಾನ್ ಮಾಡಿ ಅಪ್ಲೋಡ್ ಮಾಡಬೇಕು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಸಪ್ಟೆಂಬರ್ 30 (ಹೆಚ್ಚಿನ ಮಾಹಿತಿಗೆ ವೆಬ್‌ಸೈಟನ್ನು ಗಮನಿಸುವುದು). ಅರ್ಜಿ ಸಲ್ಲಿಕೆ ಹಾಗೂ ಆಯ್ಕೆ ಪರೀಕ್ಷೆಗಳಿಗೆ ಯಾವುದೇ ಶುಲ್ಕವಿರುವುದಿಲ್ಲ.

**ಆಯ್ಕೆ ವಿಧಾನ:** ಆಯ್ಕೆಯನ್ನು ಲಿಖಿತ ಪರೀಕ್ಷೆಗಳು ಮತ್ತು ಆಯ್ಕೆ ಶಿಬಿರದ ಮೂಲಕ ಮಾಡಲಾಗುವುದು. ಎಲ್ಲ ಜಿಲ್ಲಾ ಕೇಂದ್ರಗಳು ಮತ್ತು ಕೆಲವು ನಗರಗಳಲ್ಲಿ ಏಕಕಾಲದಲ್ಲಿ ಲಿಖಿತ ಪರೀಕ್ಷೆ ನಡೆಸಲಾಗುವುದು. 1ನೇ ಹಂತದ ಪರೀಕ್ಷೆ ಅಕ್ಟೋಬರ್ 6, 2024ರ ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ನಡೆಯಲಿದ್ದು, 1ನೇ ಹಂತದ ಪರೀಕ್ಷಾ ಫಲಿತಾಂಶವನ್ನು ವೆಬ್‌ಸೈಟ್‌ನಲ್ಲಿ ಅಕ್ಟೋಬರ್ 15ರಂದು ಪ್ರಕಟವಾಗಲಿದೆ. 2ನೇ ಹಂತದ ಪರೀಕ್ಷೆ ನವೆಂಬರ್ 10, ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ನಡೆಯಲಿದೆ. ಫಲಿತಾಂಶ ಹಾಗೂ ಇನ್ನಿತರೇ ಮಾಹಿತಿಯನ್ನು ನವೆಂಬರ್ 25ರಂದು tapassaadhana.rashtrotthana.org. ವೆಬ್‌ಸೈಟ್‌ನಲ್ಲಿ ನೀಡಲಾಗುವುದು.

**ಸೌಕರ್ಯಗಳು:** ತಪಸ್ ಹಾಗೂ ಸಾಧನಾಗೆ ಆಯ್ಕೆಯಾದ ಗಂಡು ಹಾಗೂ ಹೆಣ್ಣು ಮಕ್ಕಳಿಗೆ 11ನೇ ತರಗತಿಗೆ ಪ್ರವೇಶ ಒದಗಿಸಲಾಗುವುದಲ್ಲದೇ, ಬೇಸ್ ಸಂಸ್ಥೆಯ ನುರಿತ ಉಪನ್ಯಾಸಕರಿಂದ ತರಬೇತಿ ನೀಡಲಾಗುವುದು. ತರಗತಿಗಳು, ಪ್ರಯೋಗಾಲಯಗಳು ಹಾಗೂ ಸುಸಜ್ಜಿತ ಗ್ರಂಥಾಲಯವಿದ್ದು, ಕಠಿಣ ಪರಿಶ್ರಮದಿಂದ ಶ್ರೇಷ್ಠರೆನಿಸಲು ಸ್ಫೂರ್ತಿ ನೀಡುವಂತಿವೆ. ಕ್ಷೇಮಕರ, ಸ್ವಚ್ಛ ಮತ್ತು ಆರೋಗ್ಯದಾಯಕ ಸಸ್ಯಾಹಾರಿ ಆಹಾರವನ್ನು ಒದಗಿಸುವ ವಿದ್ಯಾರ್ಥಿ ನಿಲಯದ ವ್ಯವಸ್ಥೆ ಇರುತ್ತದೆ. ಈ ಎಲ್ಲಾ ಸೌಕರ್ಯಗಳು ಉಚಿತವಾಗಿರುತ್ತದೆ.

# ಅಸ್ಸಾಂನ ಅಹೋಂ ಸಾಮ್ರಾಜ್ಯದ ಮೋಯಿದಾಮ್ ಯುನೆಸ್ಕೋ ಪಟ್ಟಿಗೆ ಸೇರ್ಪಡೆ

ಅಸ್ಸಾಂ ರಾಜ್ಯದಲ್ಲಿ ಸುಮಾರು 600 ವರ್ಷಗಳ ಕಾಲ ಸುದೀರ್ಘ ಆಡಳಿತ ನಡೆಸಿದ್ದ ಅಹೋಮ್ ರಾಜವಂಶಕ್ಕೆ ಸಂಬಂಧಿಸಿದ ದಿಬ್ಬದ ಸಮಾಧಿ ವ್ಯವಸ್ಥೆ 'ಮೋಯಿದಾಮ್'ಗಳನ್ನು ಯುನೆಸ್ಕೋದ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರಿಸಲಾಗಿದೆ. ಇದರ ಕುರಿತು ಪ್ರತಿಕ್ರಿಯಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು 'ಇದು ದೇಶಕ್ಕೆ ಅತ್ಯಂತ ಖುಷಿಯ ಮತ್ತು ಹೆಮ್ಮೆಯ ವಿಚಾರವಾಗಿದೆ' ಎಂದು ಹೇಳಿದ್ದಾರೆ.

ಯುನೆಸ್ಕೋ ಪಾರಂಪರಿಕಾ ತಾಣಗಳ ಪಟ್ಟಿಗೆ ಸೇರಿದ ಈಶಾನ್ಯ ಭಾರತದ ಪ್ರಥಮ ಸ್ಥಳ ಎಂಬ ಖ್ಯಾತಿಗೆ ಈ ಮೋಯಿದಾಮ್‌ಗಳು ಸಾಕ್ಷಿಯಾಗಿವೆ. ಅಸ್ಸಾಂನ ಚರೈಡಿಯೊದಲ್ಲಿರುವ 'ಮೋಯಿದಾಮ್'ಗಳು ಅಹೋಮ್ ಸಾಮ್ರಾಜ್ಯದ ಮಹೋನ್ನತ ಸಂಸ್ಕೃತಿಯನ್ನು ಬಿಂಬಿಸುತ್ತವೆ. ಇದು ಪೂರ್ವಜರಿಗೆ ಅತ್ಯಂತ ಗೌರವವನ್ನು ನೀಡುವ ಸ್ಥಳವಾಗಿದ್ದು, ಖ್ಯಾತ ಅಹೋಮ್ ಸಾಮ್ರಾಜ್ಯ ಮತ್ತು ಅದರ ಸಂಸ್ಕೃತಿಯ ಕುರಿತು ಅಧ್ಯಯನ ನಡೆಸಲು ಯುವಜನತೆಗೆ ಸಹಕಾರಿಯಾಗಲಿದೆ. ಅಸ್ಸಾಂ ರಾಜ್ಯವನ್ನಾಳಿದ ಅಹೋಮ್ ಸಾಮ್ರಾಜ್ಯದ ದಿಬ್ಬಗಳ ಸಮಾಧಿ ವ್ಯವಸ್ಥೆಯನ್ನು 'ಮೋಯಿದಾಮ್'ಗಳು ಎಂದು ಕರೆಯಲಾಗುತ್ತದೆ. ಇವುಗಳನ್ನು ಯುನೆಸ್ಕೋದ ಸಾಂಸ್ಕೃತಿಕ ಸ್ವತ್ತು ವಿಭಾಗದ ಅಡಿಯಲ್ಲಿ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ



ಸೇರಿಸಲಾಗಿದೆ. ದೆಹಲಿಯಲ್ಲಿ ನಡೆದ ವರ್ಲ್ಡ್ ಹೆರಿಟೇಜ್ ಕಮಿಟಿಯ (ಡಬ್ಲ್ಯುಎಚ್‌ಸಿ) ಅಧಿವೇಶನದಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಸಾಂಸ್ಕೃತಿಕ ವಿಭಾಗದಲ್ಲಿ ಈಶಾನ್ಯ ರಾಜ್ಯದಿಂದ ಇದು ಮೊದಲ ನಾಮನಿರ್ದೇಶನ. ಅಸ್ಸಾಂ ನೈಸರ್ಗಿಕ ವರ್ಗದಲ್ಲಿ ಎರಡು ವಿಶ್ವ ಪರಂಪರೆಯ ತಾಣಗಳನ್ನು ಹೊಂದಿದೆ – ಕಾಜಿರಂಗ ರಾಷ್ಟ್ರೀಯ ಉದ್ಯಾನವನ ಮತ್ತು ಮಾನಸ್ ರಾಷ್ಟ್ರೀಯ ಉದ್ಯಾನವನ.

# ರಾಜ್ಯಗಳಿಗೆ ಎಸ್ಸಿ, ಎಸ್ಟಿ ಒಳಮೀಸಲು ಅಧಿಕಾರ: ಸರ್ವೋಚ್ಚ ನ್ಯಾಯಾಲಯ ತೀರ್ಪು

ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು ಒಳಮೀಸಲಾತಿಯ ಕುರಿತು ಐತಿಹಾಸಿಕ ತೀರ್ಪನ್ನು ನೀಡಿದೆ. 'ರಾಜ್ಯಗಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಪ್ರತ್ಯೇಕ ಒಳಮೀಸಲಾತಿಯನ್ನು ನೀಡುವ ಅಧಿಕಾರವಿದೆ' ಎಂದು ತಿಳಿಸಿದೆ. ಎಸ್‌ಸಿ, ಎಸ್‌ಟಿಗಳಲ್ಲೇ ಹೆಚ್ಚು ದಮನಿತರನ್ನು ಗುರುತಿಸಿ ಅವರ ಕಲ್ಯಾಣಕ್ಕಾಗಿ ರಾಜ್ಯ ಸರ್ಕಾರಗಳು ಈ ಕ್ರಮ ಕೈಗೊಳ್ಳಬಹುದು ಎಂದು ತನ್ನ 6:1 ಬಹುಮತದ ತೀರ್ಪಿನಲ್ಲಿ ತಿಳಿಸಿದೆ.

ಕರ್ನಾಟಕ ಸೇರಿದಂತೆ ಸಾಕಷ್ಟು ರಾಜ್ಯಗಳಲ್ಲಿ ಒಳಮೀಸಲಾತಿಗಾಗಿ ನಡೆಯುತ್ತಿರುವ ಹೋರಾಟಕ್ಕೆ ಹೊಸ ತಿರುವನ್ನು ನೀಡುವಲ್ಲಿ ಸುಪ್ರೀಂಕೋರ್ಟ್‌ನ ಈ ತೀರ್ಪು ಕಾರಣವಾಗಿದೆ. ಇದರ ಪರಿಣಾಮ ರಾಜ್ಯಗಳಲ್ಲಿರುವ ಮೀಸಲಾತಿಯೊಳಗೆ ಸಾಕಷ್ಟು ಬದಲಾವಣೆಗಳನ್ನು ಕಾಣಬಹುದಾದ ಸಾಧ್ಯತೆಗಳಿವೆ.

**2004ರ ಸುಪ್ರೀಂ ತೀರ್ಪು ರದ್ದು:** ಎಸ್‌ಸಿ, ಎಸ್‌ಟಿಯಲ್ಲಿ ಅತ್ಯಂತ ಹಿಂದುಳಿದ ಜಾತಿಗಳನ್ನು ಗುರುತಿಸಿ ಮೀಸಲಾತಿಯೊಳಗೇ ಪ್ರತ್ಯೇಕ ಮೀಸಲಾತಿ ನೀಡುವ ಅಧಿಕಾರ ರಾಜ್ಯಗಳಿಗೆ ಇದೆ ಎಂದು ಸುಪ್ರೀಂಕೋರ್ಟ್ ಹೇಳುವ ಮೂಲಕ ತಾನೇ 2004ರಲ್ಲಿ ನೀಡಿದ್ದ ತೀರ್ಪನ್ನು ರದ್ದುಪಡಿಸಿದೆ. 2004ರಲ್ಲಿ ಇ.ವಿ.ಚಿನ್ನಯ್ಯ ವರ್ಸಸ್ ಆಂಧ್ರಪ್ರದೇಶ ಸರ್ಕಾರದ ಪ್ರಕರಣದಲ್ಲಿ, 'ಶತಮಾನಗಳ ಕಾಲ ತಾರತಮ್ಯ ಹಾಗೂ ಅವಮಾನ ಎದುರಿಸಿದ ಎಲ್ಲಾ ಎಸ್‌ಸಿ, ಎಸ್‌ಟಿ ಸಮುದಾಯಗಳೂ ಒಂದೇ ಆಗಿವೆ. ಅವುಗಳಲ್ಲಿ ಉಪವರ್ಗೀಕರಣ ಸಾಧ್ಯವಿಲ್ಲ' ಎಂದು ಸುಪ್ರೀಂಕೋರ್ಟ್‌ನ ಪಂಚಸದಸ್ಯ ತೀರ್ಪು ನೀಡಿತ್ತು. ಅದರ ವಿರುದ್ಧ ಸಲ್ಲಿಕೆಯಾದ ಮೇಲ್ಮನವಿಗಳು, 2010ರಲ್ಲಿ ಪಂಜಾಬ್ ಮತ್ತು ಹರ್ಯಾಣ ಹೈಕೋರ್ಟ್ ನೀಡಿದ್ದ ತೀರ್ಪು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಮೇಲ್ಮನವಿಯೂ ಸೇರಿದಂತೆ ವಿವಿಧ ರಾಜ್ಯಗಳು ಹಾಗೂ ಸಂಘಟನೆಗಳು ಸಲ್ಲಿಸಿದ್ದ ಸುಮಾರು 30 ಅರ್ಜಿಗಳನ್ನು ಒಗ್ಗೂಡಿಸಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠ ಈ ತೀರ್ಪು ನೀಡಿದೆ. 'ಒಳಮೀಸಲು ನೀಡಲು ಪ್ರಮಾಣೀಕರಿಸಬಹುದಾದ ಮತ್ತು ಎದ್ದು ತೋರುವ ದತ್ತಾಂಶಗಳು ರಾಜ್ಯಗಳ ಬಳಿ ಇರಬೇಕು. ಇವು ಇಲ್ಲದೆ ರಾಜ್ಯಗಳು ತಮ್ಮ ಇಚ್ಛೆಯಂತೆ ಒಳಮೀಸಲು ನೀಡಲು ಸಾಧ್ಯವಿಲ್ಲ' ಎಂದೂ ಪೀಠ ತನ್ನ ತೀರ್ಪಿನಲ್ಲಿ ಸ್ಪಷ್ಟಪಡಿಸಿದೆ.

# ನ್ಯೂಯಾರ್ಕ್: ಇಂಡಿಯಾ ಡೇ ಪೆರೇಡ್‌ನಲ್ಲಿ ಕಂಗೊಳಿಸಿದ ರಾಮಮಂದಿರ

ಅಮೆರಿಕ ದೇಶದ ನ್ಯೂಯಾರ್ಕ್ ನಗರದಲ್ಲಿ ಅದ್ದೂರಿಯಾಗಿ ನಡೆದ ಇಂಡಿಯಾ ಡೇ ಪೆರೇಡ್‌ನಲ್ಲಿ ಈ ಬಾರಿಯ ವಿಶೇಷ ಆಕರ್ಷಣೆಯಾಗಿ ಕಂಗೊಳಿಸಿದ್ದು ಅಯೋಧ್ಯೆಯ ರಾಮ ಮಂದಿರ. ಭಾರತದಲ್ಲಿ 500 ವರ್ಷಗಳ ಬಳಿಕ ಪುನರ್ ನಿರ್ಮಾಣಗೊಂಡ ರಾಮಮಂದಿರದ ಮಹತ್ವ ಸಾರುವ ಸಲುವಾಗಿ ಆಯೋಜಕರು ಅಯೋಧ್ಯಾ ರಾಮಮಂದಿರದ ಪ್ರತಿಕೃತಿಯನ್ನು ಪ್ರದರ್ಶನ ಮಾಡಿದರು. ಇವುಗಳ ಜೊತೆಗೆ ಭಾರತೀಯ ಸಂಗೀತವಾದ್ಯಗಳನ್ನು ಮೊಳಗಿಸಿ, ಭಾರತದ ತ್ರಿವರ್ಣ ಧ್ವಜವನ್ನು ರಾರಾಜಿಸುವಂತೆ ಮಾಡಲಾಯಿತು. 18 ಅಡಿ ಉದ್ದ, 9 ಅಡಿ ಅಗಲ ಹಾಗೂ 8 ಅಡಿ ಎತ್ತರ ಇದ್ದ ಈ ಪ್ರತಿಕೃತಿಯನ್ನು ಭಾರತದಲ್ಲೇ ತಯಾರು ಮಾಡಿ ವಿಮಾನದ ಮೂಲಕ ನ್ಯೂಯಾರ್ಕ್ ನಗರಕ್ಕೆ ತರಲಾಗಿತ್ತು ಎಂದು ವರದಿಗಳು ತಿಳಿಸಿವೆ. ನ್ಯೂಯಾರ್ಕ್ ನಗರದ ಮ್ಯಾಡಿಸನ್ ಅವೆನ್ಯೂ ರಸ್ತೆಯ ಪೂರ್ವ 38ನೇ ರಸ್ತೆಯಿಂದ ಪೂರ್ವ 27ನೇ ರಸ್ತೆವರೆಗೆ ಈ ಮೆರವಣಿಗೆ ನಡೆಯಿತು. ಈ ಮೆರವಣಿಗೆಯಲ್ಲಿ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ, 45 ಬೂತ್‌ಗಳಲ್ಲಿ ಭಾರತೀಯ ಸಾಂಪ್ರದಾಯಿಕ ಖಾದ್ಯಗಳ ರಸದೌತಣವೂ ನಡೆಯಿತು. ಇಂಡಿಯಾ ಡೇ ಪೆರೇಡ್‌ನಲ್ಲಿ ಅಯೋಧ್ಯಾ ರಾಮ ಮಂದಿರ ಸೇರಿದಂತೆ ಒಟ್ಟು 40 ಪ್ರತಿಕೃತಿಗಳ ಪ್ರದರ್ಶನಗಳನ್ನು ನಡೆಸಲಾಯ್ತು. 50 ಗುಂಪುಗಳು ಪ್ರತ್ಯೇಕವಾಗಿ ಮೆರವಣಿಗೆಯಲ್ಲಿ ಭಾಗಿಯಾಗಿದ್ದರು.



'ವಸುಧೈವ ಕುಟುಂಬಕಂ' ಸಂದೇಶವನ್ನು ತಿಳಿಸುವ ಕಾರ್ಯವನ್ನು ಪೆರೇಡ್‌ನಲ್ಲಿ ಮಾಡಲಾಗಿದೆ. ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆ, ಸಂಪ್ರದಾಯಗಳು ಮತ್ತು ಸಾಧನೆಗಳನ್ನು ವಿವಿಧ ಫ್ಲೋಟ್‌ಗಳು ಮತ್ತು ಬ್ಯಾನರ್‌ಗಳ ಮೂಲಕ ಮೆರವಣಿಗೆಯಲ್ಲಿ ಪ್ರದರ್ಶಿಸಲಾಯಿತು.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.